# ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

**ಸುಭಾಷಿತ:**

ಯಾರಿಗಾದರು ನಿನ್ನಿಂದ ಯಾವುದೇ ಸಹಾಯದ ಅಗತ್ಯವಿದೆಯೋ ಅದನ್ನು ಬಹಳ ಪ್ರೀತಿಯಿಂದ ಮಾಡು. ಅದರೆ ಆ ಸಹಾಯದಿಂದ ನೀನು ಏನನ್ನೂ ಕೂಡ ನಿರೀಕ್ಷಿಸಬೇಡ. ನೀನು ಮಾಡಿದ ಆ ಸಹಾಯ ಯಾವುದೇ ಕಾರಣಕ್ಕೂ ವ್ಯರ್ಥ ಆಗಲಾರದು. ನೀನು ತೊಂದರೆ ಯಲ್ಲಿದ್ದಾಗ ಅದು ಒಂದಲ್ಲ ಒಂದು ರೂಪದಲ್ಲಿ ಬಂದು ನೆರವಾಗುತ್ತದೆ

**ಭಗವಾನ್ ಶ್ರೀಕೃಷ್ಣ**



REGD NO: 1327299/KARKAN/2018/26532 www.karavalitharangini.com KARAVALI THARANGINI KANNADA Weekly Mangaluru ದಿನಾಂಕ: 23-05-2025 to 29-05-2025 ಬೆಲೆ: 7-00 ಸಂಪುಟ–4 ಸಂಚಿಕೆ–48 ಪುಟಗಳು–6

ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ
www.karavalitharangini.com
ಕರಾವಳಿ ತರಂಗಿಣಿ
ಮಂಗಳೂರು







ಮಳೆಗಾಲ ಆರಂಭವಾಗುತ್ತಿದ್ದು, ಅಲ್ಲಲ್ಲಿ ಮರಗಳು ಧರೆಗುರುಳುತ್ತಿವೆ. ಅದರ ಜೊತೆ ವಿದ್ಯುತ್ ಕಂಬಗಳು, ತಂತಿಗಳು ಬೀಳುವ ಸಂಭವಗಳು ಹೆಚ್ಚಾಗಿದೆ. ಇನ್ನು ಹಳೆ ತಡೆಗೋಡೆಗಳು ಕೂಡ ಬೀಳುವ ಸಂಭವಗಳು ಬರಬಹುದು, ಹಾಗಾಗಿ ಮಳೆಯ ಸಂದರ್ಭದಲ್ಲಿ ಜಾಗರೂಕತೆಯಿಂದ ಇರುವುದು ಉತ್ತಮ.

## ಆಂಧ್ರದಲ್ಲಿ ಆನೆ ಸಂಘರ್ಷ ತಡೆಯಲು ಕುಮ್ಕಿ ಆನೆಗಳು!



**ಬೆಂಗಳೂರು:** ಮಾನವ, ಆನೆ ಸಂಘರ್ಷ ತಡೆಯುವುದರಿಂದ ಜೀವ ಹಾನಿ, ಬೆಳೆ ಹಾನಿ ತಪ್ಪುತ್ತದೆ. ಈ ಮಹತ್ವದ ಉದ್ದೇಶದಿಂದಲೇ ರಾಜ್ಯದಿಂದ ನಾಲ್ಕು ಕುಮ್ಕಿ ಆನೆಗಳನ್ನು ಆಂಧ್ರಕ್ಕೆ ಹಸ್ತಾಂತರಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ವಿಧಾನಸೌಧದ ಪೂರ್ವದ್ವಾರದಲ್ಲಿ ಅರಣ್ಯ ಇಲಾಖೆ ವತಿಯಿಂದ ಆಯೋಜಿಸಿದ್ದ ಕರ್ನಾಟಕದಿಂದ ಆಂಧ್ರಪ್ರದೇಶಕ್ಕೆ ಕೃಷ್ಣ, ಅಭಿಮನ್ಯು, ರಂಜನ್ ಮತ್ತು ದೇವ ಎಂಬ ನಾಲ್ಕು ಆನೆಗಳ ಹಸ್ತಾಂತರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, **3ನೇ ಪುಟಕ್ಕೆ**

## ಬೆಂಗಳೂರು ಜನ ಬ್ರ್ಯಾಂಡೆಡ್ ನರಕದಲ್ಲಿದ್ದಾರೆ –ಹೆಚ್.ಡಿ.ಕೆ



**ಬೆಂಗಳೂರು:** ರಾಜಧಾನಿ ಬೆಂಗಳೂರು ನಗರದಲ್ಲಿ ಎರಡು ದಿನಗಳಿಂದ ಸತತವಾಗಿ ಸುರಿದ ಮಳೆಯಿಂದ ತತ್ತರಿಸುತ್ತಿರುವ ಜನರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಬ್ರ್ಯಾಂಡೆಡ್ ನರಕದಲ್ಲಿ ನರಳುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜನ ಸತ್ತು ಬದುಕುತ್ತಿದ್ದರೆ ರಾಜ್ಯ ಕಾಂಗ್ರೆಸ್ ನಾಯಕರಿಗೆ ಸಾಧನಾ ಸಮಾವೇಶದ ಚಿಂತೆ. ವಾರದಿಂದ ಬಣ್ಣ ಬಣ್ಣದ ಸರಣಿ ಗ್ಯಾರಂಟಿ ಜಾಹೀರಾತು ಬೇರೆ. ಬೆಂಗಳೂರು ಜನ **3ನೇ ಪುಟಕ್ಕೆ**

## ಆಡಳಿತ ವೈಫಲ್ಯದ ಬಗ್ಗೆ ಮಾತಾಡಿದರೆ ಎಫ್ಐಆರ್



**ಮಂಗಳೂರು:** ರಾಜ್ಯದಲ್ಲಿ ಯಾರೇ ರಾಜ್ಯ ಸರಕಾರದ ಆಡಳಿತ ವೈಫಲ್ಯದ ಬಗ್ಗೆ ಯಾರೇ ಮಾತನಾಡಿದರೂ ಎಫ್ಐಆರ್ ಹಾಕುತ್ತಾರೆ ಎಂದು ಉಡುಪಿ ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಕಿಡಿಕಾರಿದರು. ಅವರು ನಗರದ ಬಿಜೆಪಿ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಮಂಗಳೂರಿನಲ್ಲಿ ಶ್ವೇತಾ ಪೂಜಾರಿ, ಬುರ್ಖಾಧಾರಿಗಳನ್ನು ಯಾಕೆ ಬಂಧಿಸಿಲ್ಲ ಅಂತ ಪ್ರಶ್ನಿಸಿದ್ದಕ್ಕೆ ಎಫ್ಐಆರ್ ಹಾಕುತ್ತಾರೆ, ಚಕ್ರವರ್ತಿ ಸೂಲಿಬೆಲೆ, ಹರೀಶ್ ಪೂಂಜ, ಶರಣ್ ಪಂಪ್ವೆಲ್, ಯಶಪಾಲ್ ಸುವರ್ಣ, ಶ್ರೀಕಾಂತ್ ಶೆಟ್ಟಿ ಮೇಲೆ ಕೇಸು ದಾಖಲಿಸುತ್ತಾರೆ **3ನೇ ಪುಟಕ್ಕೆ**








# ಸಂಪಾದಕೀಯ

ಕರಾವಳಿ ತರಂಗಿಣಿ

## ಯಾರಿಗೆ ಯಾರುಂಟು ಎರವಿನ ಸಂಸಾರ...

– ಲಲಿತಶ್ರೀ ಪ್ರೀತಮ್ ರೈ



ಪ್ರಾಣ ಒಂದು ನೀರಿನ ಗುಳ್ಳೆಯಂತೆ ಅದು ಯಾವ ಕ್ಷಣದಲ್ಲಿ ಬೇಕಾದರೂ ಹಾರಿ ಹೋಗಬಹುದು. ಅದಕ್ಕೆ ಪುರಂಧರದಾಸರು "ಯಾರಿಗೆ ಯಾರುಂಟು ಎರವಿನ ಸಂಸಾರ, ನೀರ ಮೇಲಣ ಗುಳ್ಳೆ ನಿಜವಲ್ಲ ಹರಿಯೇ" ಅಂತ ತನ್ನ ದಾಸ ವಾಣಿಯಲ್ಲಿ ಹೇಳಿರಬೇಕು. ಈಗ ನಮ್ಮ ಕಣ್ಣ ಮುಂದೆ ಇದ್ದ ಜೀವ ಇನ್ನೊಂದು ಕ್ಷಣದಲ್ಲಿ ಕಟ್ಟಿಗೆಯ ತುಂಡಿನಂತೆ ಮಲಗಿಬಿಡಬಹುದು. ಇಂತಹ ಸಾವನ್ನು ನೋಡಿಯೇ ಗೌತಮ ಎಲ್ಲವನ್ನು ತೊರೆದು ಬುದ್ದನಾಗಿ ಬದಲಾಗಿದ್ದು ಅಲ್ಲವೇ?. ಇರುವಷ್ಟು ದಿನ ನಾನು ನನ್ನದು ಎನ್ನುವ ಅಹಂಕಾರದಲ್ಲಿ ಮೆರೆದು, ಪರರನ್ನು ಹೀಯಾಳಿಸಿ, ಅವಮಾನಿಸಿ ಕೊನೆಗೊಂದು ದಿನ ಈ ಜಗದಲ್ಲಿ ನನ್ನದೆಂಬುದು ಏನು ಇಲ್ಲ ಎಂದು ತಮ್ಮವರನ್ನೆಲ್ಲಾ ಬಿಟ್ಟು ಹೊರಟು ಬಿಡುವ ನಮಗೇಕೆ ಅಹಂಕಾರ?. ಈ ಭೂಮಿಯಲ್ಲಿ ಹುಟ್ಟಿದ ಪ್ರತೀ ಜೀವಿಗೂ ಸಾವು ಕಟ್ಟಿಟ್ಟ ಬುತ್ತಿ. ಇವತ್ತಲ್ಲ ನಾಳೆ ನಾವಾದರೂ ಹೋಗಲೇ ಬೇಕು. ಮರಣವೆಂದರೆ ದೇಹದಿಂದ ಆತ್ಮ ಸ್ವತಂತ್ರವಾಗುವುದು ಎಂಬ ಭಾವನೆ ಜಗತ್ತಿನ ಎಲ್ಲ ದೇಶಗಳಲ್ಲಿಯೂ ಇದೆ. ಹಾಗೆಯೇ ಎಲ್ಲಾ ಧರ್ಮಗಳಲ್ಲಿಯೂ ಮರಣದ ಬಗ್ಗೆ ಅವರವರದೇ ಆದ ದೃಷ್ಟಿಕೋನ, ಕಟ್ಟುಪಾಡುಗಳನ್ನು ನಾವು ನೋಡಬಹುದು. ಮನುಷ್ಯ ವೈಜ್ಞಾನಿಕವಾಗಿ ಅದೆಷ್ಟೇ ಮುಂದುವರಿದಿದ್ದರೂ ಅವನಿಗೆ ಇನ್ನೂ ಬೇಧಿಸಲಾಗದ ಒಂದು ವಿಸ್ಮಯವೆಂದರೆ ಅದು ಸಾವು. ಸಾವನ್ನು ಬೇಧಿಸುವ ವಿಷಯ ಬಿಡಿ ಈ ಸಾವಿನ ಬಗ್ಗೆ ಪರಿಪೂರ್ಣವಾದ ವ್ಯಾಖ್ಯಾನವನ್ನೂ ಕೊಡುವುದು ಮನುಷ್ಯನಿಗೆ ಸಾದ್ಯವಾಗಲಿಲ್ಲ. ಎಷ್ಟೋ ಕಡೆ ಮನುಷ್ಯ ಸತ್ತ ನಂತರ ಹೆಣವನ್ನು ಮನೆಯಿಂದ ಹೊರಗೆ ಇಟ್ಟು ಬಿಡುತ್ತಾರೆ. ಸತ್ತ ವ್ಯಕ್ತಿಯ ಹೆಣವನ್ನು ತನ್ನ ಸ್ವಂತ ಮನೆಯ ಒಳಗೆ ತೆಗೆದುಕೊಂಡು ಹೋಗುವುದೇ ನಿಶಿದ್ಧವಾಗಿರುತ್ತದೆ. ಬದುಕಿರುವಷ್ಟು ದಿನ ತನ್ನ ಮನೆಗಾಗಿ ಜೀವವನ್ನೆ ಸವೆದಿರುತ್ತಾನೆ ಆದರೆ ಹೆಣವಾದ ಮೇಲೆ ಮನೆಯಿಂದ ಹೊರಗೆ ಮಲಗಿರುತ್ತಾನೆ. ಸಾವಿನ ಮರು ಕ್ಷಣವೇ ಸತ್ತ ವ್ಯಕ್ತಿಯ ದೇಹ ಕೊಳೆಯಲು ಆರಂಭಿಸುತ್ತದೆ. ಹಾಗಾಗಿ ಬೇಗನೆ ಶವಕ್ಕೆ ಅಂತ್ಯ ಸಂಸ್ಕಾರವನ್ನು ಮಾಡಲಾಗುತ್ತದೆ. ಈ ಅಂತ್ಯ ಸಂಸ್ಕಾರದಲ್ಲೂ ಎರಡು ವಿಧಾನಗಳಿವೆ ಹೂಳುವ ಮತ್ತು ಸುಡುವ ಪದ್ದತಿ. ಪ್ರಪಂಚದ ಯಾವುದೋ ಒಂದು ಮೂಲೆಯಲ್ಲಿ ಸತ್ತ ಮನುಷ್ಯನ ದೇಹವನ್ನು ಕಾಡು ಪ್ರಾಣಿಗಳಿಗೆ ಆಹಾರವಾಗಿ ಕೊಡುವ ಪದ್ಧತಿಯೂ ಇದೆಯಂತೆ. ಮನುಷ್ಯ ಹುಟ್ಟಿನಿಂದ ಸಾಯುವವರೆಗೂ ಹಲವು ವಿಧವಾದ ಸೂತಕಗಳನ್ನಂಟಿಸಿಕೊಂಡಿರುತ್ತಾನೆ. ಜಾತಿ ಸೂತಕ, ಜನನ ಸೂತಕ, ಮರಣಸೂತಕ, ಉಚ್ಚಿಷ್ಟ ಸೂತಕ, ರಜೋಸೂತಕ. ಚೆನ್ನ ಬಸವಣ್ಣ 'ಭ್ರಾಂತು ಸೂತಕ' 'ವರ್ಣ ಸೂತಕ'ಗಳನ್ನೂ ಸೇರಿಸಿ "ಇವರೆಂತು ಭಕ್ತರಹರು?" ಎಂದು ಪ್ರಶ್ನಿಸುತಾರೆ. ಅವರ ಪ್ರಕಾರ ಶಿವಲಿಂಗಧಾರಿಗಳಿಗೆ ಯಾವುದೇ ಸೂತಕ ಇರುವುದಿಲ್ಲವಂತೆ "ಗಂಗೆಗೆ ಕಟ್ಟಿಲ್ಲ ಲಿಂಗಕ್ಕೆ ಮುಟ್ಟಿಲ್ಲ" ಎಂಬ ಗಾದೆ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸೂತಕದ ಅವಧಿಯಲ್ಲಿ ದೇವಕರ್ಮ ಮಾಡಬಾರದು ಎಂದು ಗರುಡಪುರಾಣ, ಮನುಸ್ಮೃತಿ ಸೇರಿ ದಂತೆ ಹಲವಾರು ಗ್ರಂಥಗಳಲ್ಲಿ ಉಲ್ಲೇಖಿಸಿರುವುದನ್ನು ನಾವು ಕಾಣಬಹುದು. ಅದರಲ್ಲೂ ಮರಣ ಸೂತಕದ ಸಂದರ್ಭದಲ್ಲಿ ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಪಿತೃ ಕರ್ಮ ಮಾಡುವ ನಿಯಮವನ್ನು ಹೇಳಲಾಗಿದೆ. ಸಂತರಾದವರ ತಂದೆ–ತಾಯಿಯ ಮರಣದ ನಂತರ ಕೇವಲ ಸ್ನಾನ ಮಾಡುವುದರಿಂದ ಸೂತಕವು ಕೊನೆಗೊಳ್ಳುತ್ತದೆ ಎಂದು ಹೇಳಲಾಗಿದೆ. "ರಾಜ ಧರ್ಮಾ ಯತನಂ ಸರ್ವೇಶಾನ್ ತಸ್ಮಾದಾನವರುದ್ಧಃ ಪ್ರೇತ ಪ್ರಸವ ದೋಷಃ" ಅಂತ ಶಂಖಸ್ಮೃತಿಯಲ್ಲಿ ಉಲ್ಲೇಖಿಸಲಾಗಿದೆ. ದೇಶಾಚಾರ ಮತ್ತು ಲೋಕಾಚಾರದ ಪ್ರಕಾರ, 10 ದಿನಗಳನ್ನು ಸಾಮಾನ್ಯ ವಾಗಿ ಸೂತಕದ ಅವಧಿ ಎಂದು ಪರಿಗಣಿಸಲಾಗುತ್ತದೆ. ಮದನ ಪಾರಿಜಾತದಲ್ಲಿ ದೇಶಾಚಾರ ಮತ್ತು ಲೋಕಾಚಾರದ ವಿಚಾರಕ್ಕೆ ಅನುಗುಣವಾಗಿ ಸೂತಕವನ್ನು ಪರಿಗಣಿಸುವುದು ಸೂಕ್ತ ಎಂದು ಸೂಚನೆ ನೀಡಲಾಗಿದೆ. ಕೆಲವು ಕಡೆಗಳಲ್ಲಿ ಸಾವಿನ ಸೂತಕಕ್ಕಿಂತಲೂ ಜನನದ ಸೂತಕ ಹೆಚ್ಚು ಪರಿಣಾಮಕಾರಿ ಎಂದು ಬಾವಿಸಲಾಗುತ್ತದೆ ಹಾಗೆಯೇ ಪುರಾಣಗಳಲ್ಲಿ ಕೂಡ ಉಲ್ಲೇಖಿಸಲಾಗಿದೆ. ನಮ್ಮ ಹಿರಿಯರು ಮಾಡಿಕೊಂಡು ಬಂದಿರುವ ಪ್ರತಿ ಆಚರಣೆಗಳಿಗೂ ಅದರದೇ ಆದ ಅರ್ಥವಿದೆ. ಆದರೆ ಇಂತಹ ಆಚರಣೆಗಳು ನಮ್ಮ ಮುಂದಿನ ಪೀಳಿಗೆಗೆ ಮುಟ್ಟುತ್ತಿಲ್ಲ ಎನ್ನುವುದೇ ಬೇಸರದ ಸಂಗತಿ. ಉದಾಹರಣೆಗೆ ಹಿಂದೂ ಸಂಪ್ರದಾಯದಲ್ಲಿ ಮದುವೆಯ ಸಂದರ್ಭದಲ್ಲಿ ಮಾಡುವ ವಿಧಿ ವಿದಾನಗಳೇ ವಿಶಿಷ್ಟಪೂರ್ಣವಾಗಿತ್ತು. ಹಿಂದೆ ವಾರಗಟ್ಟಲೆ ನಡೆಯುತ್ತಿದ್ದ ಮದುವೆ ಸಮಾರಂಭಗಳ ವಿಧಿ ಇಂದು ಒಂದು ದಿನದಲ್ಲಿ ಮುಗಿಯುತ್ತಿದೆ. ಅಂಗಡಿಗಳಲ್ಲಿ ಮಾರುವ ಇನ್ಸ್ಟಂಟ್ ಅಡುಗೆಯ ಪದಾರ್ಥಗಳಂತಾಗಿದೆ ನಮ್ಮ ಮದುವೆಯ ವೈಭವ. ಇಂದಿನ ಯುವ ಪೀಳಿಗೆಯನ್ನು ಕೇಳಿದರೆ ಮದುವೆ ಎಂದರೆ ಕುಡಿದು, ಕುಣಿದು ಕುಪ್ಪಳಿಸುವುದಷ್ಟೆ. ಅಲ್ಲಿನ ಆಚಾರ ವಿಚಾರಗಳ ಬಗ್ಗೆ ತಿಳಿಯದು. ಇದಕ್ಕೆ ಕಾರಣ ಯಾರು? ಅವರ ಹಿರಿಯರಲ್ಲವೇ?. ಹಿಂದೆ ಒಂದು ಕಾಲವಿತ್ತು ಸಂಬಂಧಿಕರ ಮನೆಯಲ್ಲಿ ಮದುವೆ, ಮುಂಜಿ, ಕೊಲ, ನೇಮ ಏನೇ ಇರಲಿ ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗುವುದನ್ನು ಮರೆಯುತ್ತಿರಲಿಲ್ಲ. ಹಾಗೆ ಕರೆದುಕೊಂಡು ಹೋದಾಗ ಅಲ್ಲಿ ನಡೆಯುವ ಆಚರಣೆಗಳ ಬಗ್ಗೆ ಮಕ್ಕಳಿಗೆ ಪ್ರಶ್ನೆಗಳು ಮೂಡುತ್ತಿದ್ದವು. ಆಗ ತಂದೆ ತಾಯಿ ಅಂತಹ ಆಚರಣೆಗಳ ಬಗ್ಗೆ ವಿವರಿಸುತ್ತಿದ್ದ ಕಾರಣ ನಮ್ಮ ಸಂಸ್ಕೃತಿಯ ಆಚಾರ ವಿಚಾರಗಳು ಚಿಕ್ಕ ವಯಸ್ಸಿನಲ್ಲಿಯೇ ಅವರಲ್ಲಿ ಅಚ್ಚೊತ್ತುತ್ತಿತ್ತು. ಆದರೆ ಇಂದು ಮಕ್ಕಳನ್ನು ಕೇವಲ ಮನೋರಂಜನೆ ಇದ್ದ ಕಡೆ ಮಾತ್ರ ಕರೆದುಕೊಂಡು ಹೋಗುವುದು ವಾಡಿಕೆಯಾಗಿದೆ. ಹೀಗಿರುವಾಗ ಮಕ್ಕಳಿಗೆಲ್ಲಿ ತಿಳಿಯಬೇಕು ನಮ್ಮ ಆಚರಣೆಗಳು ನೀವೇ ಹೇಳಿ. ಅದಕ್ಕಾಗಿಯೇ ಮಕ್ಕಳಿರುವಾಗಲೇ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ತಮ್ಮ ಆಚಾರ ವಿಚಾರಗಳ ಬಗ್ಗೆ ತಿಳಿಸಿಕೊಟ್ಟು ಮುಂದಿನ ಪೀಳಿಗಗೆ ದಾರಿ ದೀಪವಾಗಬೇಕು.

# ಸಂಪ್ರದಾಯ

## ಪತ್ತನಾಜೆ




ವಿಭಿನ್ನ ಆಚರಣೆಗಳಲ್ಲಿ ತುಳುನಾಡಿನ ಸಂಪ್ರದಾಯಗಳೇ ವಿಶಿಷ್ಟವಾಗಿದೆ. ಅದರಲ್ಲಿ ಪತ್ತನಾಜೆಯೂ ಒಂದು. ತುಳುವ ಬೇಶ (ಸಾಮಾನ್ಯವಾಗಿ ಮೇ 24) ತಿಂಗಳಿನ 10ನೇ ದಿನ ಬರುವ ಪತ್ತನಾಜೆ ಕೃಷಿಕರನ್ನು ಕೃಷಿ ಕೆಲಸದ ಕಡೆಗೆ ಕರೆದೊಯ್ಯುವ ದಿನ ಎಂದರೆ ತಪ್ಪಾಗಲಾರದು. ಮಳೆಗಾಲ ಕರಾವಳಿ ಜಿಲ್ಲೆಗಳಲ್ಲಿ ಆರಂಭಗೊಳ್ಳುವ ಹಿನ್ನಲೆಯಲ್ಲಿ ಈ ಭಾಗದ ಜನ ತನ್ನ ಎಲ್ಲಾ ಆಚರಣೆಗಳಿಗೆ, ಮನೋರಂಜನೆಗಳಿಗೆ ವಿಶ್ರಾಂತಿ ನೀಡುವ ದಿನವೂ ಇದೇ ಆಗಿದೆ. ಈ ಎಲ್ಲಾ ದೈವಗಳು ಪತ್ತನಾಜೆಯ ಬಳಿಕ ಘಟ್ಟಪ್ರದೇಶಕ್ಕೆ ತೆರಳುತ್ತದೆ ಎಂದು ನಂಬಿಕೊಂಡು ಬಂದಿರುವ ಇಲ್ಲಿನ ಜನ ಈ ದಿನದ ಬಳಿಕ ಯಾವುದೇ ದೈವಿಕ ಕಾರ್ಯಕ್ರಮಗಳನ್ನು ನಡೆಸುವುದಿಲ್ಲ. ಸೀಮೆಯ ಪ್ರಧಾನ ದೇವಸ್ಥಾನಗಳ ಧ್ವಜಾವರೋಹಣ ಅಂದರೆ ಜಾಡಿ ಹಬ್ಬವನ್ನು ಇಳಿಸುವುದು ಕಾರ್ಯಕ್ರಮ ಪತ್ತನಾಜೆಯಂದೇ ನಡೆಯುತ್ತದೆ. ವಿವಿಧ ದೈವಸ್ಥಾನಗಳಲ್ಲಿನ ಬಂಡಿ ಉತ್ಸವಗಳು ಪತ್ತ ನಾಜೆಯಂದೇ ಕೊನೆಗೊಳ್ಳುತ್ತವೆ. ಅದಕ್ಕೆ "ಪತ್ತನಾಜೆಗೆ ಬಂಡಿ ಪಗ್ಗ ಎಲ್ಲ ಒಳಗೆ" ಎನ್ನುವ ಮಾತು ಕೂಡ ಇದೆ. ಅಲ್ಲದೆ ಗಂಡು ಕಲೆ ಎನಿಸಿಕೊಂಡಿರುವ ಯಕ್ಷಗಾನದ ಕಲಾವಿದರೂ ಪತ್ತನಾಜೆಯ ಬಳಿಕ ತನ್ನ ಗೆಜ್ಜೆಯನ್ನು ಕಳಚಿಟ್ಟು ತಮ್ಮನ್ನೂ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಇಲ್ಲಿನ ವಾಡಿಕೆಯಾಗಿದೆ. ಪತ್ತನಾಜೆ ದಿನದಂದು ಪ್ರತೀ ದೈವಸ್ಥಾನ ಹಾಗೂ ದೇವಸ್ಥಾನಗಳಲ್ಲಿ ವಿಶೇಷ ಪೂಜೆಯೂ ನಡೆಯುತ್ತದೆ. ಅಲ್ಲದೇ ದೈವಗಳನ್ನು ನಂಬಿಕೊಂಡು ಬರುವ ಎಲ್ಲಾ ಮನೆತನಗಳಲ್ಲೂ ಈ ದಿನ ತನ್ನ ಕುಲದೈವಗಳಿಗೆ ವಿಶೇಷ ಪ್ರಾರ್ಥನೆ ಸಲ್ಲಿಸುವ ಪದ್ದತಿಯಿದೆ. ಪತ್ತನಾಜೆಯ ವಿಚಾರದಲ್ಲಿ ಕೆಲವು ನಂಬಿಕೆಗಳಿವೆ. ಅವುಗಳಲ್ಲಿ ಪತ್ತನಾಜೆಯಂದು ಹತ್ತು ಹನಿ ಮಳೆ ಸುರಿಯುತ್ತದೆ ಎಂಬ ಭಾವನೆ ಇದೆ. ಅದು ನಂಬಿಕೆ ಮಾತ್ರವಾಗಿರದೆ ಆ ದಿನ ಮಳೆ ಬಿಳುತ್ತದೆ. ಪತ್ತನಾಜೆಯಂದು ದೇವರು ಮನುಷ್ಯನ ತೂಕ ನೋಡುತ್ತಾನಂತೆ ಎನ್ನುವುದು ಕೂಡ ಹಿರಿಯರ ಮಾತು.

# ಕ್ಷೇತ್ರದರ್ಶನ




ಕಳಶೇಶ್ವರ

ಚಿಕ್ಕಮಂಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನಲ್ಲಿರುವ ಕಳಸ ಪಟ್ಟಣವು ಪಶ್ಚಿಮದ ಘಟ್ಟಗಳಿಂದ ಸುತ್ತುವರಿದಿರುವ ಒಂದು ಪ್ರಕೃತಿ ರಮಣೀಯವಾದ ಸ್ಥಳ. ಇಲ್ಲಿಯ ವಾತಾವರಣ, ಹಸಿರಿನ ವನಸಿರಿ ಎಲ್ಲರನ್ನು ತನ್ನತ್ತ ಸೆಳೆಯುತ್ತದೆ. ಅಂತಹ ಪ್ರಕೃತಿಯ ಮಡಿಲಲ್ಲಿರುವ ದೇವಸ್ಥಾನವೇ ಕಳಶೇಶ್ವರ ದೇವಸ್ಥಾನ. ಕಳಶೇಶ್ವರ ಸ್ವಾಮಿ ದೇವಾಲಯವು ಭಾರತದ ಐತಿಹಾಸಿಕ ಸ್ಥಳವಾಗಿದೆ. ಅದು ಭದ್ರಾ ನದಿಯ ಮೇಲೆ ನಿಂತಿದೆ. ಇಲ್ಲಿ ವಸಿಷ್ಠರು, ಅಗಸ್ತ್ಯರು ತಪಸ್ಸನ್ನಾಚರಿಸಿದ್ದರಂತೆ. ಇತಿಹಾಸಕಾರರ ಪ್ರಕಾರ ಹೊಯ್ಸಳ ದೇವಾಲಯವಿದ್ದು, ಅದು ಪಾಳುಬಿದ್ದ ನಂತರ ನಾಯಕರ ಕಾಲದಲ್ಲಿ ಈಗಿನ ಕಟ್ಟಡಗಳು ನಿರ್ಮಿತವಾಗಿದೆ. ಈ ದೇವಾಲಯದ ಗರ್ಭಗುಡಿಯಲ್ಲಿ 9 ಅಂಗುಲ ಎತ್ತರದ ಲಿಂಗವು ಉತ್ತರಕ್ಕೆ ಬಾಗಿದೆ. ಗರ್ಭಗುಡಿಯ ಮೇಲಿನ ಶಿಖರಕ್ಕೆ ಲೋಹದ ಕಲಶವಿದ್ದು, 16 ಕಲ್ಲಿನ ಕಂಬಗಳಿರುವ ನವರಂಗಕ್ಕೆ ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ದ್ವಾರಗಳಿವೆ. ಮುಖಮಂಟಪದ ಒಳಪಕ್ಕದಲ್ಲಿ ನಾಲ್ಕು ಕಂಬಗಳೂ ಮುಂಭಾಗದಲ್ಲಿ ದ್ರಾವಿಡ ಶೈಲಿಯ, ಅಡಿಯಲ್ಲಿ ಸಿಂಹಗಳಿರುವ ಎರಡು ಕಂಬಗಳೂ ಇವೆ. ಪಕ್ಕದಲ್ಲಿ ದೇವಿ ಮಂದಿರವಿದೆ. ಈ ಮಂದಿರದ ಮಹಾದ್ವಾರದ ಇಕ್ಕೆಲಗಳಲ್ಲಿ ಸಿಂಹವಾಹಿನಿಯರಾದ ಸ್ತ್ರೀದ್ವಾರಪಾಲಕರಿದ್ದಾರೆ. ಪುರಾಣ ಕಥೆಯ ಪ್ರಕಾರ, ಮೈತ್ರಾವರ್ಣರು ಎನ್ನುವ ಐವರು ಋಷಿಗಳು ತಪಸ್ಸಿಗಾಗಿ ಶಾಂತವಾದ ಸ್ಥಳದ ಹುಡುಕಾಟದಲ್ಲಿದ್ದಾಗ ಭದ್ರಾನದಿಯ ದಡದಲ್ಲಿ ತಪಸ್ಸು ಮಾಡುವ ಮನಸ್ಸಾಗಿ ಅಲ್ಲೇ ತಪಸ್ಸನ್ನಾಚರಿಸಿದರು ಎನ್ನಲಾಗುತ್ತದೆ. ಇಂದ್ರನು ಮೈತ್ರಾವರ್ಣರ ತಪೋಭಂಗ ಮಾಡಲು ಅಪ್ಸರ ಸ್ತ್ರೀಯರನ್ನು ಕಳಿಸುತ್ತಾರೆ. ತಪೋಭಂಗವಾಗಿ ಅವರ ರೇತಸ್ಸು ಸ್ಕಲನವಾಗುತ್ತದೆ. ಋಷಿ ಮುನಿಗಳ ರೇತಸ್ಸು ವ್ಯರ್ಥವಾಗಬಾರದೆಂದು ದೇವತೆಗಳು ಅದನ್ನು ಒಂದು ಕಲಶದಲ್ಲಿ ಶೇಖರಿಸಿಟ್ಟರಂತೆ. ರೇತಸ್ಸನ್ನು ಶೇಖರಿಸಿಟ್ಟ ಸ್ಥಳವೇ ಭದ್ರಾದಂಡೆ. ಆ ಕಳಸದಿಂದ ಅಗಸ್ತ್ಯರು ಹುಟ್ಟಿಕೊಂಡರು ಎನ್ನಲಾಗುತ್ತದೆ. ಪೂರ್ವದಲ್ಲಿ ಪಾರ್ವತಿ ಪರಮೇಶ್ವರರಿಗೆ ವಿವಾಹ ನಡೆಯುವಾಗ ಎಲ್ಲಾ ದೇವಾನುದೇವತೆಗಳು ನೆರೆದಿದ್ದರು, ಅಗಸ್ತ್ಯ ಮುನಿಗಳೂ ಹೋಗಿದ್ದರು. ಆಗ ಭೂಮಿಯ ಭಾರ ಹೆಚ್ಚಾಗಿ ಒಂದು ಕಡೆಗೆ ವಾಲಿತ್ತಂತೆ. ಆಗ ಶಿವನು ಅಗಸ್ತ್ಯರಿಗೆ ದಕ್ಷಿಣಕ್ಕೆ ಹೋಗುವಂತೆ ತಿಳಿಸಿದರಂತೆ, ಅದರಿಂದ ಶಿವ–ಪಾರ್ವತಿ ಕಲ್ಯಾಣ ನೋಡಲು ಸಾಧ್ಯವಿಲ್ಲವೆಂದು ಬೇಸರ ಪಟ್ಟ ಅಗಸ್ತ್ಯರಿಗೆ ಪರಮೇಶ್ವರನು ಕಳಸದಲ್ಲೇ ವಿವಾಹದ ದೃಶ್ಯವನ್ನು ತೋರಿಸುವಂತೆ ವರ ನೀಡುತ್ತಾರೆ. ಹಾಗಾಗಿ ಇಲ್ಲಿ ಗಿರಿಜಾ ಕಲ್ಯಾಣ ನಡೆಯುತ್ತದೆ. ಮಹಾದ್ವಾರದಿಂದ ಮೆಟ್ಟಿಲು ಹತ್ತಿ ಹೋದರೆ ಶಿವನ ದರ್ಶನವಾಗುತ್ತದೆ. ಅಲ್ಲಿಯೇ ಆನೆ ಗಣಪತಿ ಇದೆ. ಕಾಳಾಸುರನನ್ನು ಸಂಹರಿಸಿ ದಂತಹ ಗಣಪತಿ ಇದಾಗಿದ್ದು, ಇಲ್ಲಿ ಗಂಡು ಆನೆ ಗಣಪತಿ ಹಾಗು ಹೆಣ್ಣು ಆನೆ ಗಣಪತಿ ಇದೆ. ಇವೆರಡನ್ನೂ ಪೂಜಿಸಲಾಗುತ್ತದೆ. ಕಳಸದಲ್ಲೇ ಒಡಮೂಡಿದ ಶಿವನ ದೇವಾಲಯ ಇಲ್ಲಿ ಮಾತ್ರ ಕಾಣಸಿಗುವುದು. ಕಾಶಿಗೆ ಹೋದಷ್ಟೇ ಪುಣ್ಯ ಇಲ್ಲಿ ಸಿಗುತ್ತದೆ ಎನ್ನುವುದು ಭಕ್ತರ ನಂಬಿಕೆ. ಈ ದೇವಸ್ಥಾನದಲ್ಲಿ ಪ್ರತಿ ದಿನ ಯಾತ್ರಾರ್ಥಿಗಳಿಗೆ ಮಧ್ಯಾಹ್ನ 1 ರಿಂದ 2 ಘಂಟೆಯ ವರೆಗೆ ಭೋಜನಕ್ಕೆ ವ್ಯವಸ್ಥೆ ಇದೆ. ಚಿಕ್ಕಮಂಗಳೂರಿನ ಪ್ರಕೃತಿಯ ಸವಿಯನ್ನು ಸವಿಯಲು ಹೋಗುವಾಗ ಒಮ್ಮೆ ಪುರಾಣ ಪವಿತ್ರವಾದ ಕಳಶನಾಥನ ದರುಶನ ಪಡೆದು ಪುನೀತರಾಗಲು ಮರೆಯದಿರಿ.

# ವೈದ್ಯೋನಾರಾಯಣೋ ಹರೀಃ

## ಶಂಖಪುಷ್ಪ




ದೇವರ ಪೂಜೆಗೆ ವಿಶೇಷವೆಂದು ಹೇಳಲಾಗುವ ಬಿಳಿ, ಕೆಂಪು, ಕಡುನೀಲಿ, ತಿಳಿ ನೇರಳೆ ಮುಂತಾದ ಬಣ್ಣಗಳಲ್ಲಿರುವ ಶಂಖಪುಷ್ಪದಲ್ಲಿ ಏಕ ಮತ್ತು ದ್ವಿತೀಯ ಎಂಬ ಎರಡು ತಳಿಗಳಿದ್ದು, ಏಕ ತಳಿಯ ಹೂವಿನಲ್ಲಿ ದೊಡ್ಡದಾದ ಒಂದು ಎಸಳಿದ್ದು, ದ್ವಿತೀಯ ತಳಿಯಲ್ಲಿ ಒಂದಕ್ಕೊಂದು ಸುರುಳಿ ಸುತ್ತಿ ಕೊಂಡಿರುವ ಐದು ಎಸಳುಗಳಿವೆ. ಹೂವಿನ ದಳಗಳು ಶಂಖದ ಒಳಭಾಗದ ಆಕಾರವನ್ನು ಹೊಂದಿರುವ ಕಾರಣ ಶಂಖಪುಷ್ಪ ಎಂಬ ಹೆಸರು ಬಂದಿರಬಹುದು. ಆಯುರ್ವೇದದ ಪ್ರಕಾರ ಬಿಳಿವರ್ಣದ ಶಂಖಪುಷ್ಪ ಪ್ರಭಾವಶಾಲಿ. ಶಂಕಪುಷ್ಪವನ್ನು ಸಂಸ್ಕೃತದಲ್ಲಿ ಗವಾಕ್ಷ, ರೋಮವಲ್ಲಿ ಎಂದರೆ, ಕನ್ನಡದಲ್ಲಿ ಗಿರಿಕರ್ಣಿಕೆ ಬಳ್ಳಿ, ತಮಿಳಿನಲ್ಲಿ ಕಾಕ್ಕಣಮ್, ಕವಾಚ್ಚಿ, ತೆಲುಗಿನಲ್ಲಿ ದಿಂಟೆನ, ಮಲಯಾಳಂನಲ್ಲಿ ಆರಲ್, ಶಂಖಪುಷ್ಪಂ ಎಂದು ಕರೆಯುತ್ತಾರೆ. ಹಿಂದಿನ ಕಾಲದಲ್ಲಿ ಅರೆತಲೆ ನೋವು ನಿವಾರಿಸಲು ಶಂಖಪುಷ್ಪದ ಬೇರನ್ನು ತೇದು ಅಂಜನದ ಹಾಗೆ ಕಣ್ಣಿಗೆ ಸವರುತ್ತಿದ್ದರು. ದೇಹದಲ್ಲಿ ಬಾವು ಬಂದಿದ್ದರೆ ಇದರ ಎಲೆಗಳ ರಸವನ್ನು ಬಿಸಿ ಮಾಡಿ ಲೇಪಿಸಿದರೆ ಬಾವು ನೋವು ಗುಣವಾಗುತ್ತದೆ.

ಬೇರಿನ ರಸವನ್ನು ಹಾಲಿನಲ್ಲಿ ಬೆರೆಸಿ ಸೇವಿಸಿದರೆ ಶ್ವಾಸನಾಳಗಳ ಸಮಸ್ಯೆಗೆ ನಾಟಿ ವೈದ್ಯದಲ್ಲಿ ಬಳಸಲಾಗುತ್ತಿತ್ತು.

ಮುಖದಲ್ಲಿ ಬಿಳಿಕಲೆಗಳಿದ್ದರೆ ಬೇರನ್ನು ತೇದು ಎಳ್ಳೆಣ್ಣೆಯಲ್ಲಿ ಕಲಸಿ ಲೇಪಿಸಿದರೆ ಗುಣವಾಗುವುದು.

ಇದರ ಬೀಜವನ್ನು ಹುರಿದು ಹುಡಿ ಮಾಡಿ ಬೆಂಕಿ ಗುಳ್ಳೆಗಳ ನೋವು ಶಮನದ ಔಷಧಕ್ಕೆಬಳಸುತ್ತಾರೆ.

ಹೊಟ್ಟೆ ಸೆಳೆತ, ಪಚನದ ತೊಂದರೆ, ಮೂತ್ರಪಿಂಡ, ಅನ್ನನಾಳ, ಪಿತ್ತಜನಕಾಂಗ, ಪಿತ್ತಕೋಶಗಳ ಕಾಯಿಲೆ ಹಾಗೂ ಹೊಟ್ಟೆ ಉಬ್ಬರದ ತೊಂದರೆಗಳನ್ನು ಶಂಖಪುಷ್ಪದ ಬಳಕೆಯಿಂದ ನಿವಾರಿಸಬಹುದೆಂದು ಆಯುರ್ವೇದ ಹೇಳಿದೆ

ಆಹಾರಕ್ಕೆ ನೈಸರ್ಗಿಕವಾಗಿ ಬಣ್ಣ ಬರಲು ಈ ಹೂವನ್ನು ಕೆಲವು ಕಡೆ ಬಳಸಲಾಗುತ್ತದೆ.

ಹಳ್ಳಿಗಳಲ್ಲಿ ತಲೆಗೆ ಹಚ್ಚುವ ತೈಲ ತಯಾರಿಕೆಯಲ್ಲಿ ನೀಲಿ ಶಂಖಪುಷ್ಪ ಹೂ ಮತ್ತು ಅದರ ಬೇರನ್ನು ಭೃಂಗರಾಜ ಸೊಪ್ಪಿನೊಂದಿಗೆ ಬಳಸುತ್ತಾರೆ. ಇದರಿಂದ ಕೂದಲು ಕಪ್ಪಾಗಿ ಬೆಳೆಯುತ್ತದೆ.

# ಕಾಮಧೇನು

## ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ




ಭಾರತದಲ್ಲಿ ಅದರಲ್ಲಿಯೂ ವಿಶೇಷವಾಗಿ ಉತ್ತರ ಭಾರತದ ಜಮ್ಮು ಮತ್ತು ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡಗಳಂತಹ ರಾಜ್ಯಗಳಲ್ಲಿ ಮೈಮನ ರೋಮಾಂಚನಗೊಳಿಸುವಂತಹ ಸಾಕಷ್ಟು ಕಣಿವೆಗಳನ್ನು ಕಾಣಬಹುದು. ಇದಕ್ಕೆ ಕಾರಣ ಹಿಮಾಲಯ ಪರ್ವತಗಳಿಗೆ ಸಾಕಷ್ಟು ಹತ್ತಿರದಲ್ಲಿರುವುದೂ ಕೂಡ ಆಗಿರಬಹುದು. ಇಂತಹ ಕಣಿವೆ ಪ್ರದೇಶಗಳನ್ನು ವೀಕ್ಷಿಸುವುದೆಂದರೆ ಅದೊಂದು ಅದ್ಬುತವಾದ ಅನುಭವ ಎಂದರೆ ತಪ್ಪಾಗಲಾರದು. ಕಾಶ್ಮೀರವನ್ನು ದೇವರ ಸರ್ವೋತ್ಕೃಷ್ಟವಾದ ವಾಸಸ್ಥಾನವೆಂದು ನಂಬಲಾಗುತ್ತದೆ. ಅಂತಹ ಕಣಿವೆಗಳಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಅನಂತನಾಗ್ ಜಿಲ್ಲೆಯಲ್ಲಿರುವ ಪಹಲ್ಗಾಮ್ ಪಟ್ಟಣದಿಂದ 15 ಕಿ.ಮೀ ದೂರದಲ್ಲಿರುವ ಬೇತಾಬ್ ಕಣಿವೆಯೂ ಪ್ರಮುಖವಾದುದುದು. ಈ ಕಣಿವೆಗೆ ಬೇತಾಬ್ ಎಂದು ಹೆಸರು ಬರಲು ಕಾರಣ 1983ರಲ್ಲಿ ಬಿಡುಗಡೆಗೊಂಡಿದ್ದ ಬೇತಾಬ್ ಎಂಬ ಹಿಂದಿ ಚಿತ್ರವನ್ನು ಈ ಕಣಿವೆ ಪ್ರದೇಶದಲ್ಲಿ ಚಿತ್ರೀಕರಿಸಿರುವುದು. ಇದನ್ನು ಮೊಘಲರ ಸಮಯದಲ್ಲಿ ಹಾಗನ್ ಕಣಿವೆ ಎಂದು ಕರೆಯಲಾಗುತ್ತಿತ್ತು. ಇದು 1960ರಿಂದಲೂ ಚಲನಚಿತ್ರ ಮಾಡುವವರಿಗೆ ಒಂದು ಅಚ್ಚುಮೆಚ್ಚಿನ ಸ್ಥಳವಾಗಿದೆ. ಇಲ್ಲಿಯ ಕೆಲವು ಸ್ಥಳಗಳಿಗೆ ಬಾಲಿವುಡ್ ಚಲನಚಿತ್ರಗಳ ಹೆಸರಿಡಲಾಗಿದೆ. ಈ ಕಣಿವೆಯ ಮಧ್ಯದಲ್ಲಿ ಪ್ರಶಾಂತವಾಗಿ ಹರಿಯುವ ಲಿಡ್ಡರ್ ನದಿ ಹಾಗೂ ಅದರ ಸುತ್ತಮುತ್ತಲಿನ ಸ್ವಚ್ಛ ಹಾಗೂ ರಮಣೀಯ ದೃಶ್ಯಾವಳಿಗಳು ಪ್ರವಾಸಿಗರನ್ನು ಕೈ ಬೀಸಿ ಕರೆಯುತ್ತದೆ. ಸುಂದರವಾದ ಹಿಮದಿಂದ ಆವೃತವಾದ ಮತ್ತು ಹಸಿರು ಹುಲ್ಲುಗಾವಲುಗಳಿಂದ ಸುತ್ತುವರಿಯಲ್ಪಟ್ಟ ಬೇತಾಬ್ ಕಣಿವೆಯು ಎಂತಹ ಮನಸ್ಥಿತಿಯವರನ್ನೂ ಮಂತ್ರಮುಗ್ದಗೊಳಿಸುವುದರಲ್ಲಿ ಸಂದೇಹವಿಲ್ಲ. ಬೇತಾಬ್ ಕಣಿವೆಯ ಪ್ರತಿಯೊಂದು ಮೂಲೆಯಲ್ಲಿಯೂ ಶಾಂತತೆ ಮತ್ತು ಪ್ರಶಾಂತತೆಯ ಸಾರವನ್ನು ಅನುಭವಿಸ ಬಹುದಾಗಿದೆ. ಅನಂತನಾಗ್ ಜಿಲ್ಲೆಯ ಪಹಲ್ಗಾಮ್ ಹತ್ತಿರದ ಲ್ಲಿರುವ ಬೇತಾಬ್ ಕಣಿವೆಯನ್ನು ಪ್ರತೀ ವರ್ಷ ಸಾವಿರಾರು ಜನ ಪ್ರವಾಸಿಗರು ಭೇಟಿ ನೀಡುತ್ತಾರೆ. ಇಲ್ಲಿ ಇನ್ನೂ ಹಲವು ಮನಮೋಹಕ ಪ್ರದೇಶಗಳಿವೆ. ಅವುಗಳಲ್ಲಿ ಲಿಡ್ಡರ್ ನದಿ, ಪಹಲ್ಗಾಮ್, ಒವೆರಾರು ವನ್ಯಜೀವಿ ಧಾಮ, ತುಲಿಯನ್ ಸರೋವರ ಪ್ರಮುಖವಾದುದು. ಬೇತಾಬ್ ಕಣಿವೆಯಲ್ಲಿ ಛಾರಣಿಗರನ್ನು ಕೂಡ ಕಾಣಬಹುದು. ಯಾಕೆಂದರೆ ಈ ಪ್ರದೇಶ ಚಾರಣಕ್ಕೆ ಹೇಳಿಮಾಡಿ ಸಿದ ಸ್ಥಳ. ಬೇತಾಬ್ ಕಣಿವೆಯು ಆಕಾಶದೆತ್ತರದ ಪರ್ವತಗಳಿಂದ ಸುತ್ತುವರಿದಿರುವುದರಿಂದ ಇದರ ತಪ್ಪಲಿನಲ್ಲಿ ಚಾರುಣಿಗರಿಗೆ ಶಿಬಿರ ಹೂಡಲು ಅನುಕೂಲಕರವಾಗಿದೆ. ನೀವು ಇಲ್ಲಿ ಕುದುರೆ ಸವಾರಿ ಮತ್ತು ನದಿಗಳಲ್ಲಿ ವಿಹಾರವನ್ನೂ ಕೂಡ ಬೇತಾಬ್ ಕಣಿವೆಯ ಸುತ್ತಲು ಮಾಡಬಹುದಾಗಿದೆ. ಇಲ್ಲಿಗೆ ಜಗತ್ತಿನಾದ್ಯಂತದ ಪ್ರವಾಸಿಗರು ಭೇಟಿ ನೀಡುತ್ತಾರೆ. ವರ್ಷವಿಡೀ ತಾಪಮಾನ ಮತ್ತು ಹವಾಮಾನವು ಅನುಕೂಲಕರವಾಗಿರುವುದರಿಂದ ಬೇತಾಬ್ ಕಣಿವೆಯನ್ನು ವರ್ಷದ ಯಾವುದೇ ಸಮಯದಲ್ಲಿಯೂ ಭೇಟಿ ಕೊಡಬಹುದಾಗಿದೆ. ಇದೊಂದು ಬಹಳಮೆಚ್ಚಿನ ಬೇಸಿಗೆಯ ತಾಣವಾಗಿದು ವುದರಿಂದ ಈ ಸ್ಥಳವು ಬೇಸಿಗೆಯ ಸಮಯದಲ್ಲಿ ಪ್ರವಾಸಿಗರನ್ನು ಬರಮಾಡಿಕೊಳ್ಳುವುದರಲ್ಲಿ ನಿರತವಾಗಿರುತ್ತದೆ. ಬೇತಾಬ್ ಕಣಿವೆಗೆ ಶ್ರೀನಗರದ ವಿಮಾನ ನಿಲ್ದಾಣದಿಂದ ಸುಮಾರು 96 ಕಿ.ಮೀ ದೂರವಷ್ಟೆ. ಇಲ್ಲಿಂದ ನೀವು ಬಾಡಿಗೆ ವಾಹನದ ಮೂಲಕ ಬೇತಾಬ್ ಕಣಿವೆಗೆ ಪ್ರಯಾಣಿಸಬಹುದಾಗಿದೆ. ಬೇತಾಬ್ ಕಣೀವೆಗೆ ರೈಲಿನ ಮುಖಾಂತರವು ಹೋಗಬಹುದಾಗಿದೆ. ಶ್ರೀನಗರ ರೈಲ್ವೆ ನಿಲ್ದಾಣದಿಂದ 90 ಕಿ.ಮೀ ದೂರದಲ್ಲಿ ಬೇತಾಬ್ ಕಣಿವೆ ಇದೆ. ಇನ್ನು ಮಧ್ಯ ಪ್ರದೇಶ ರಾಜ್ಯದ ಅನುಪ್ಪುರ ಜಿಲ್ಲೆಯ ತೀರ್ಥಸ್ಥಳವಾದ ಅಮರಕಂಟಕ ಎಂಬ ಬೆಟ್ಟವೊಂದರಲ್ಲಿರುವ ನರ್ಮದಾ ಕುಂಡದಿಂದ ಉಗಮಗೊಳ್ಳುವ ನರ್ಮದಾ ನದಿಯು ಮಧ್ಯದೇಶ ರಾಜ್ಯದ ಜೀವ ನದಿಯಾಗಿದೆ. ಈ ನರ್ಮದಾ ನದಿ ಕಣಿವೆಯು ಸುಂದರವಾಗಿದೆ. ಮಧ್ಯಪ್ರದೇಶದ ಜಬಲ್ಪುರ್‌ನಲ್ಲಿರುವ ಬೇಡಾ ಘಾಟ್‌ನ ನರ್ಮದಾ ನದಿಯ ಕಣಿವೆ ಪ್ರದೇಶದಲ್ಲಿ ಧುವಾಧರ್ ಜಲಪಾತವಿದೆ. ಉತ್ತರಾಖಂಡದ ಗಂಗೋತ್ರಿ ಬಳಿಯಿರುವ ಭಾಗೀರತಿ ಕಣಿವೆಯು ಆಕರ್ಷಕ ಬೆಟ್ಟ ಪರ್ವತಗಳ ಮಧ್ಯದಲ್ಲಿ ಹರಿದಿರುವ ಭಾಗೀರಥಿ ನದಿಯಿಂದ ತನ್ನ ಹೆಸರನ್ನು ಪಡೆದಿದೆ. ಹಿಂದೂ ಧರ್ಮದಲ್ಲಿ ಭಾಗಿರಥಿ ನದಿಯನ್ನು ಗಂಗೆಯ ಮೂಲ ಎಂದು ತಿಳಿಯಲಾಗಿದೆ. ಹಿಮಾಚಲ ಪ್ರದೇಶ ರಾಜ್ಯದ ಕುಲ್ಲು ಜಿಲ್ಲೆಯಲ್ಲಿರುವ ಕುಲ್ಲು ಕಣಿವೆಯು ಒಂದು ರೋಮಾಂಚಕ ಪ್ರವಾಸಿ ಆಕರ್ಷಣೆಯಾಗಿದೆ. ಬಯಾಸ್ ನದಿಯು ಸೊಗಸಾಗಿ ಹರಿಯುವ ಈ ಕಣಿವೆಯಲ್ಲಿ ರಾಫ್ಟಿಂಗ್ ಮೊದಲಾದ ಸಾಹಸ ಮಯ ಚಟುವಟಿಕೆಗಳು ನಡೆಯುತ್ತಿರುತ್ತವೆ

# ಕಲ್ಪವೃಕ್ಷ

@ಪ್ರೀತಂ ರೈ ಇ

## ರೈಫಲ್‌ಮನ್ ಭಗನ್ ಸಿಂಗ್

1971 ರ ಇಂಡೋ–ಪಾಕ್ ಯುದ್ಧದ ಸಮಯದಲ್ಲಿ, ಆರ್‌ಎಫ್‌ಎನ್ ಭಗನ್ ಸಿಂಗ್ ಅವರ 12 ರಾಜ್ ರಿಫ್ ಘಟಕವು ಪೂರ್ವ ಗಡಿಯಲ್ಲಿ ನಿಯೋಜಿಸಲ್ಪಟ್ಟಿತು ಮತ್ತು ಯುದ್ಧವು ನಿಜವಾಗಿಯೂ ಪ್ರಾರಂಭವಾದಾಗ ಸಕ್ರಿಯ ಕಾರ್ಯಾಚರಣೆಗಳಲ್ಲಿ ತೊಡಗಿಸಿಕೊಂಡಿತು. ಪೂರ್ವ ವಲಯದಲ್ಲಿ ನಡೆದ ಒಂದು ಕಾರ್ಯಾಚರಣೆಯ ಸಂದರ್ಭದಲ್ಲಿ, ಡಿಸೆಂಬರ್ 01, 1971 ರಂದು ರೈಫಲ್‌ಮ್ಯಾನ್ ಭಗನ್ ಸಿಂಗ್ ಮತ್ತು ಅವರ ತುಕಡಿಗೆ ಭಾರೀ ಭದ್ರತೆಯ ಶತ್ರು ಪೋಸ್ಟ್ ಅನ್ನು ತೆರವುಗೊಳಿಸುವ ಕಾರ್ಯವನ್ನು ವಹಿಸಲಾಯಿತು. ಅವರು ಮುನ್ನಡೆಯುತ್ತಿದ್ದಂತೆ, ಶತ್ರು ತುಕಡಿಯು ತೀವ್ರವಾದ ಶತ್ರು ಶೆಲ್ ದಾಳಿ ಮತ್ತು ಭಾರೀ ಸಣ್ಣ–ಶಸ್ತ್ರಾಸ್ತ್ರಗಳ ಗುಂಡಿನ ದಾಳಿಯನ್ನು ಎದುರಿಸಿತು, ಇದು ಅತ್ಯಂತ ಅಪಾಯಕಾರಿ ಪರಿಸ್ಥಿತಿಯನ್ನು ಸೃಷ್ಟಿಸಿತು. ತುಕಡಿಯು ಶತ್ರು ಸ್ಥಾನದಿಂದ ಸುಮಾರು ಇಪ್ಪತ್ತೈದು ಗಜಗಳಷ್ಟು ದೂರದಲ್ಲಿದ್ದಾಗ, ರೈಫಲ್‌ಮ್ಯಾನ್ ಭಗನ್ ಸಿಂಗ್ ಬಂಕರ್‌ನೊಳಗೆ ಇರಿಸಲಾದ 106mm ಬಂದೂಕನ್ನು ಗಮನಿಸಿದರು, ಇದು ಅವರ ಒಡನಾಡಿಗಳಿಗೆ ಗಮನಾರ್ಹ ಬೆದರಿಕೆಯನ್ನುಂಟು ಮಾಡಿತು. ಆರಂಭಿಕ ದಾಳಿಯ ಸಮಯದಲ್ಲಿ ಗಾಯಗೊಂಡಿದ್ದರೂ, ರೈಫಲ್‌ಮ್ಯಾನ್ ಭಗನ್ ಸಿಂಗ್ ಅಸಾಧಾರಣ ಧೈರ್ಯ ಮತ್ತು ದೃಢಸಂಕಲ್ಪವನ್ನು ಪ್ರದರ್ಶಿಸಿದರು. ನಿರಂತರ ಶತ್ರುಗಳ ಗುಂಡಿನ ದಾಳಿಯ ಅಡಿಯಲ್ಲಿ ತೆವಳುತ್ತಾ, ಬಂದೂಕನ್ನು ತಟಸ್ಥಗೊಳಿಸಲು ನಿರ್ಧರಿಸಿ ಅವರು ಬಂಕರ್ ಕಡೆಗೆ ಸಾಗಿದರು. ಅವರು ಸಮೀಪಿಸುತ್ತಿರುವಾಗ, ಮತ್ತೆ ಲಘು ಮೆಷಿನ್ ಗನ್ ಗುಂಡಿನ ದಾಳಿಗೆ ಒಳಗಾದರು. ತೀವ್ರವಾಗಿ ಗಾಯಗೊಂಡರೂ ಧೈರ್ಯಶಾಲಿಯಾಗಿ, ರೈಫಲ್‌ಮ್ಯಾನ್ ಭಗನ್ ಸಿಂಗ್ ಬಂಕರ್ ತಲುಪಿ ಹ್ಯಾಂಡ್ ಗ್ರೆನೇಡ್‌ಗಳನ್ನು ಬಳಸಿ ಅದನ್ನು




ನಾಶಪಡಿಸಿ, ಶತ್ರು ಆಯುಧವನ್ನು ನಿಶ್ಯಬ್ದಗೊಳಿಸಿದರು. ಅವರ ಧೈರ್ಯಶಾಲಿ ಕೃತ್ಯವು ಅವರ ತುಕಡಿಯು ಮುನ್ನಡೆಯಲು ಮತ್ತು ಯಶಸ್ವಿಯಾಗಿ ತಮ್ಮ ಗುರಿಯನ್ನು ಸಾಧಿಸಲು ದಾರಿ ಮಾಡಿಕೊಟ್ಟಿತು. ದುರಂತವೆಂದರೆ, ಈ ಕಾರ್ಯಾಚರಣೆಯ ಸಮಯದಲ್ಲಿ ರೈಫಲ್‌ಮನ್ ಭಗನ್ ಸಿಂಗ್ ಸಾವನ್ನಪ್ಪಿದರು. ಅಗಾಧವಾದ ಪ್ರತಿಕೂಲ ಪರಿಸ್ಥಿತಿಯಲ್ಲೂ ರೈಫಲ್‌ಮ್ಯಾನ್ ಭಗನ್ ಸಿಂಗ್ ಅವರ ಶೌರ್ಯ ಮತ್ತು ಅಚಲ ದೃಢಸಂಕಲ್ಪವು ಧೈರ್ಯ ಮತ್ತು ಸ್ವಯಂ ತ್ಯಾಗದ ಅತ್ಯುನ್ನತ ಮಾನದಂಡಗಳನ್ನು ಪ್ರದರ್ಶಿಸಿತು. ಅವರ ಕ್ರಮಗಳು ನಿರ್ಣಾಯಕ ಶತ್ರು ಸ್ಥಾನವನ್ನು ತಟಸ್ಥಗೊಳಿಸಿದ್ದಲ್ಲದೆ, ಅವರ ಒಡನಾಡಿಗಳು ನವೀಕೃತ ಹುರುಪಿನಿಂದ ಕಾರ್ಯಾಚರಣೆಯನ್ನು ಮುಂದುವರಿಸಲು ಪ್ರೇರೇಪಿಸಿದವು. ಕಾರ್ಯಾಚರಣೆಯ ಸಮಯದಲ್ಲಿ ರೈಫಲ್‌ಮ್ಯಾನ್ ಭಗನ್ ಸಿಂಗ್ ಅಸಾಧಾರಣ ಧೈರ್ಯ, ದೃಢಸಂಕಲ್ಪ ಮತ್ತು ಅನುಕರಣೀಯ ನಾಯಕತ್ವವನ್ನು ಪ್ರದರ್ಶಿಸಿದರು, ಅತ್ಯುನ್ನತ ಶ್ರೇಣಿಯ ಧೈರ್ಯವನ್ನು ಪ್ರದರ್ಶಿಸಿದರು. ಅವರ ಅಸಾಧಾರಣ ಶೌರ್ಯ ಮತ್ತು ಸರ್ವೋಚ್ಚ ತ್ಯಾಗವನ್ನು ಗುರುತಿಸಿ, ರೈಫಲ್‌ಮ್ಯಾನ್ ಭಗನ್ ಸಿಂಗ್ ಅವರಿಗೆ ಮರಣೋತ್ತರವಾಗಿ ಪ್ರತಿಷ್ಠಿತ ವೀರ ಚಕ್ರವನ್ನು ನೀಡಲಾಯಿತು. ಆರ್‌ಎಫ್‌ಎನ್ ಭಗನ್ ಸಿಂಗ್ ಪತ್ನಿ ಶ್ರೀಮತಿ ಗುಲಾಬ್ ಕನ್ವರನ್ನು ಅಗಲಿದ್ದಾರೆ. ರೈಫಲ್‌ಮ್ಯಾನ್ ಭಗನ್ ಸಿಂಗ್ ರಾಜಸ್ಥಾನದ ಜುಂಜುನು ಜಿಲ್ಲೆಯ ಲುಟು ಗ್ರಾಮದವರಾಗಿದ್ದು, ಜನವರಿ 14, 1946 ರಂದು ಶ್ರೀ ರಾಮ್ ರತನ್ ಸಿಂಗ್ ಮತ್ತು ಶ್ರೀಮತಿ ಲಕ್ಷ್ಮಿ ದೇವಿ ದಂಪತಿಗಳಿಗೆ ಜನಿಸಿದರು. ಅವರು ಭಾರತೀಯ ಸೇನೆಗೆ ಸೇರುವ ಮೂಲಕ ತಮ್ಮ ಜೀವನವನ್ನು ರಾಷ್ಟ್ರ ಸೇವೆಗೆ ಮುಡಿಪಾಗಿಡಲು ನಿರ್ಧರಿಸಿದರು. ಅವರನ್ನು ಭಾರತೀಯ ಸೇನೆಯ ರಜಪೂತನಾ ರೈಫಲ್ಸ್ ರೆಜಿಮೆಂಟ್‌ನ 12 ನೇ ರಜಪೂತನಾ ರೈಫಲ್ಸ್ ಬೆಟಾಲಿಯನ್‌ಗೆ ನೇಮಿಸಲಾಯಿತು. ಇವರನ್ನು ಕರಾವಳಿ ತರಂಗಿಣಿ ಹೆಮ್ಮೆಯಿಂದ ನೆನಪಿಸಿಕೊಳ್ಳುತ್ತಿದೆ.

# ಪಾರಿಜಾತ

ಕರಾವಳಿ ತರಂಗಿಣಿ

ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವ ಹೆಣ್ಣು ಈ ಸಮಾಜದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ತುಳಿತಕ್ಕೆ ಒಳಗಾಗುತ್ತಾ ಬಂದಿದ್ದಾಳೆ ಎನ್ನುವುದು ಜಗಜ್ಜಾಹಿರಾದ ಸತ್ಯ. ಹಾಗಂತ ಹೆಣ್ಣಿಗೆ ಈ ಸಮಾಜದಲ್ಲಿ ಸ್ಥಾನ ಇಲ್ಲ ಎಂದರೆ ತಪ್ಪು. ಹೆಣ್ಣು ಮಗಳಾಗಿ, ತಂಗಿಯಾಗಿ, ಅಕ್ಕನಾಗಿ, ಸೊಸೆಯಾಗಿ, ಅಮ್ಮನಾಗಿ, ಅತ್ತೆಯಾಗಿ, ಅಜ್ಜಿಯಾಗಿ ಮುತ್ತಜ್ಜಿಯಾಗಿ ತನ್ನ ಸ್ಥಾನಕ್ಕೆ ನ್ಯಾಯ ಒದಗಿಸುತ್ತಾ ಬಂದಿದ್ದಾಳೆ. ಹೆಣ್ಣು ಸಂಸಾರದ ಕಣ್ಣು. ಅವಳ ನೆರಳಿನಲ್ಲಿ ಬೆಳೆವ ಮಕ್ಕಳು ಎಂದೆಂದಿಗೂ ಮರೆಯಲಾಗದೆ ಬಯಸುವುದು ತನ್ನ ತಾಯಿಯ ಮಡಿಲು. ತಾಯಿಯ ಮಡಿಲನ್ನು ಬಯಸದ ಹೃದಯ ಈ ಜಗದಲ್ಲಿ ಇರಲು ಸಾದ್ಯವಿಲ್ಲ. ತನ್ನ ತಾಯಿಯ ಮಡಿಲನ್ನು ಬಯಸುವ ಗಂಡು ಈ ಸಮಾಜದಲ್ಲಿ ಬೇರೆ ಹೆಣ್ಣು ಮಕ್ಕಳನ್ನು ನೋಡುವ ದೃಷ್ಟಿ ಮಾತ್ರ ಬೇರೆಯದ್ದೇ ಆಗಿರುತ್ತದೆ. ಇಂತಹ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಮನೆಯಿಂದ ಹೊರಗೆ ಬಂದು ಸಾದಿಸುವುದು ಕಷ್ಟದ ಕೆಲವಾಗಿತ್ತು. ಅಂತಹ ಸಮಯದಲ್ಲಿಯೂ ಹೆಣ್ಣು ಮಕ್ಕಳು ತಾನು ಯಾವ ಗಂಡಿಗೂ ಕಡಿಮೆ ಇಲ್ಲ ಎನ್ನುವುದನ್ನು ತೋರಿಸಿಕೊಟ್ಟು ಇಂದಿನ ಆದುನಿಕ ಯುಗದ ಹೆಣ್ಣು ಮಕ್ಕಳ ಸಾದನೆಗೆ ಹಾದಿಯಾಗಿದ್ದಾರೆ. ಅಂತಹ ಹೆಣ್ಣು ಮಕ್ಕಳಿಂದ ಪ್ರೇರೇಪಿತರಾದ ಅದೆಷ್ಟೋ ಹೆಣ್ಣು ಮಕ್ಕಳಲ್ಲಿ ಕರಾವಳಿ ತರಂಗಿಣಿಯ ಇಂದಿನ ಅತಿಥಿ "ವೇದಾ ಕೃಷ್ಣಾಮೂರ್ತಿ". ಇವರು ಕರ್ನಾಟಕದ ಚಿಕ್ಕಮಗಳೂರಿನ ಕಡೂರಿನಲ್ಲಿ 1992, ಅಕ್ಟೋಬರ್ 16ರಂದು ಹುಟ್ಟಿದರು. ತನ್ನ 12ನೇ ವಯಸ್ಸಿಗೆ ಕರಾಟೆಯಲ್ಲಿ 2 "ಬ್ಲಾಕ್ ಬೆಲ್ಟ್" ಪಡೆದ ಹಿರಿಮೆ ಇವರದ್ದು. ವೇದಾ 12 ವರ್ಷ ವಯಸ್ಸಿನವಳಾಗಿದ್ದಾಗ, ಮಿಥಾಲಿ ರಾ




ಜ್ ಅವರನ್ನು ಇವರ ಶಾಲೆಯಲ್ಲಿ ಸನ್ಮಾನಿಸಲಾಯಿತು. ಇದರ ನಂತರ ಮಿಥಾಲಿ ರಾಜ್ ಅವರು ವೇದಾರವರ ಆದರ್ಶರಾದರು. ಅಲ್ಲಿಂದ ವೇದರವರ ಕ್ರಿಕೇಟ್ ಬದುಕು ಶುರುವಾಗಿ, 2005ರಲ್ಲಿ ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕ್ರಿಕೆಟ್‌ನಲ್ಲಿ ತಮ್ಮ ಔಪಚಾರಿಕ ಕ್ರಿಕೆಟ್ ತರಬೇತಿ ಪ್ರಾರಂಭಿಸಿದರು. ಕ್ರಿಕೆಟ್ ಕ್ಷೇತ್ರದಲ್ಲಿ ಸಾದನೆ ಮಾಡಬೇಕೆಂಬ ಮಗಳ ಕನಸನ್ನು ನನಸಾಗಿಸಲು, ವೇದಾ ಅವರ ತಂದೆ ಚಿಕ್ಕಮಗಳೂರಿನಿಂದ ಬೆಂಗಳೂರಿನಲ್ಲಿ ಕುಟುಂಬದೊಡನೆ ನೆಲೆಸಿದರು. ತರಬೇತಿಯ ಜೊತೆಗೆ ಕುಟುಂಬದ ಒತ್ತಾಸೆಯಿಂದ ನವೆಂಬರ್ 2015 ರಲ್ಲಿ, ಅವರ ಹೆಸರು ಬಿ–ಗ್ರೇಡ್ ಒಪ್ಪಂದದ ಪಟ್ಟಿಯಲ್ಲಿ ಸೇರಿತು. ಇದು ಮೊದಲ ಬಾರಿಗೆ ಬಿಸಿಸಿಐ ಮಹಿಳಾ ಆಟಗಾರರಿಗೆ ಒಪ್ಪಂದಗಳನ್ನು ನೀಡಿತು. ಬಲಗೈ–ಬ್ಯಾಟ್ಸ್‌ಮನ್ ಮತ್ತು ಎಡಗೈ ಬೌಲರ್ ಆದ ಇವರು ಮುಂದೆ ಇಂಗ್ಲೆಂಡಿನ ವಿರುದ್ಧ ಅಂತರಾಷ್ಟ್ರೀಯ ಮಹಿಳಾ ಕ್ರಿಕೆಟ್‌ಗೆ ಪಾದರ್ಪಣೆ ಮಾಡಿದರು. 2017ರ "ಮಹಿಳಾ ಕ್ರಿಕೆಟ್ ವಿಶ್ವಕಪ್" ಫೈನಲ್ ತಲುಪಿದ ಭಾರತ ತಂಡದ ಸದಸ್ಯರಾಗಿದ್ದರು. ಅವರು ಬಿಗ್ ಬ್ಯಾಷ್‌ನಲ್ಲಿ ಆಡುವ ಭಾರತದ ಮೂರನೇ ಮಹಿಳಾ ಕ್ರಿಕೆಟಿಗರು. ಫೆಬ್ರವರಿ 2018ರಲ್ಲಿ ಏಕದಿನ ಪಂದ್ಯಗಳಲ್ಲಿ 1000 ರನ್‌ಗಳನ್ನು ಗಳಿಸಿದ ಭಾರತದ ಕಿರಿಯ ಮಹಿಳಾ ಆಟಗಾರ್ತಿಯೂ ಇವರೇ ಆಗಿದ್ದಾರೆ. ಆದರೆ ಜಗತ್ತನ್ನು ಕಾಡಿದ ಮಹಾಮಾರಿ ಕೋವಿಡ್ 19 ಗೆ ಒಂದೇ ವಾರದಲ್ಲಿ ತನ್ನ ತಾಯಿ ಮತ್ತು ಸಹೋದರಿಯನ್ನು ಕಳೆದುಕೊಂಡು ನೋವಿನ ಪ್ರಪಾತಕ್ಕೆ ತಳ್ಳಲ್ಪಟ್ಟ ಇವರು ಈಗ ಆ ನೋವನ್ನು ಹೊರ ಬರಲು ಪ್ರಯತ್ನಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಇವರ ಮನಸ್ಸಿನ ನೋವು ಅಳಿಸಿ ಹೋಗಿ ಅವರ ಸಾದನೆಯ ಹಾದಿಯ ಕನಸುಗಳು ಕೈ ಕೂಡಲಿ ಎನ್ನುವುದು ಕರಾವಳಿ ತರಂಗಿಣಿಯ ಶುಭ ಹಾರೈಕೆ.



ಕರಾವಳಿ ತರಂಗಿಣಿ

# ಕಲಾ ತರಂಗಿಣಿ



## ನಿದ್ರಾದೇವಿ ನೆಕ್ಸ್ಟ್‌ಡೋರ್ ಹಾಡು ರಿಲೀಸ್ ಮಾಡಿದ ಸಲಗ

ಈ ವರ್ಷದ ಬಹುನಿರೀಕ್ಷಿತ ಕನ್ನಡ ಸಿನಿಮಾಗಳಲ್ಲಿ ಒಂದು ನಿದ್ರಾದೇವಿ Next Door ಸಿನಿಮಾ. ಈಗಾಗಲೇ ಟೀಸರ್ ಮೂಲಕ ಗಮನಸೆಳೆದ ಈ ಚಿತ್ರದ ಮೊದಲ ಹಾಡು ರಿಲೀಸ್ ಆಗಿದೆ. ಬೆಂಗಳೂರಿನ ಎಂಎಂಬಿ ಲೆಗಸಿಯಲ್ಲಿ ದುನಿಯಾ ವಿಜಯ್ ಕುಮಾರ್ ಸ್ಲಿಪ್ ಲೆಸ್ ಆಂಥೆಮ್ ಬಿಡುಗಡೆ ಮಾಡಿ ಇಡೀ ತಂಡಕ್ಕೆ ಶುಭಾಶಯ ತಿಳಿಸಿದರು. ಪ್ರವೀರ್ ಶೆಟ್ಟಿ ನಾಯಕನಾಗಿ ನಟಿಸಿರುವ ಈ ಚಿತ್ರಕ್ಕೆ ಸುರಾಗ್ ಸಾಗರ್ ಆಕ್ಷನ್ ಕಟ್ ಹೇಳಿದ್ದಾರೆ. ದುನಿಯಾ ವಿಜಯ್ ಕುಮಾರ್ ಮಾತನಾಡಿ, ಸಾಂಗ್ ತುಂಬಾ ಚೆನ್ನಾಗಿದೆ. ಹೀರೋ ಕೂಡ ಮುದ್ದಾಗಿ ಕಾಣಿಸುತ್ತಾರೆ. ಹೀರೋಯಿನ್ ಕೂಡ ಚೆನ್ನಾಗಿ ಕಾಣಿಸುತ್ತಾರೆ. ಪ್ರವೀರ್ ಡ್ಯಾನ್ಸ್ ಎನರ್ಜಿ ನೋಡಿ ಖುಷಿಯಾಯ್ತು. ಇಡೀ ತಂಡಕ್ಕೆ ಒಳ್ಳೆಯದಾಗಲಿ ಎಂದ ಅವರು, ಹಾಡಿನ ಸಾಹಿತ್ಯವನ್ನು ಕೇಳಿ ಇಂಡಸ್ಟ್ರಿಯಲ್ಲಿ ನಡೆಯುವ ಸಮಸ್ಯೆಗಳಿಗೆ ಫನ್ನಿಂಗ್ ಯಾಗಿ ಹೋಲಿಕೆ ಮಾಡಿದರು. ಲಿರಿಕ್ಸ್ ತುಂಬಾ ಇಂಟ್ರೆಸ್ಟಿಂಗ್ ಆಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನಟ ಪ್ರವೀರ್ ಶೆಟ್ಟಿ ಮಾತನಾಡಿ, ಈ ದಿನಕ್ಕೆ ಬಹಳ ದಿನದಿಂದ ಕಾಯುತ್ತಿದ್ದೆ. ಸಾಂಗ್ ಬಿಡುಗಡೆಯಾಗಿದೆ. ಈ ಸಾಂಗ್ ಹಿಂದೆ ತುಂಬಾ ಜನ ಕಷ್ಟಪಟ್ಟಿದ್ದಾರೆ. ಡೈರೆಕ್ಟರ್, ಅವರ ಪತ್ನಿ, ನಕುಲ್, ಗುಬ್ಬಿ ಎಲ್ಲರೂ ಒಟ್ಟಿಗೆ ಸೇರಿ ಹಾಡು ಮಾಡಿದ್ದಾರೆ. ತಾರಕ್ ಮಾಸ್ಟರ್ ತುಂಬಾ ಚೆನ್ನಾಗಿ ಕೊರಿಯೋಗ್ರಫಿ ಮಾಡಿದ್ದಾರೆ ಎಂದು ಹೇಳಿದರು. ನಿರ್ಮಾಪಕ ಜಯರಾಮ್ ಮಾತನಾಡಿ, ನಾನು ಲಕ್ಕಿ. ನಾನು ಸಿನಿಮಾ ಮಾಡುವುದು, ಅದನ್ನು ಸಪೋರ್ಟ್ ಮಾಡುವುದು ಒಂದು ಕಡೆಯಾದರೆ, ಸಿನಿಮಾ ಮಾಡಿ ಆದಮೇಲೆ ನಿಜವಾದ ಜರ್ನಿ ಶುರುವಾಗುವುದು. ನಾನು ಈಗ ಆ ಜರ್ನಿ ನೋಡುತ್ತಿದ್ದೇನೆ. ಇದನ್ನು ಜನರಿಗೆ ತಲುಪಿಸುವುದು ಕಷ್ಟ ಅನ್ನುವುದು ಅರಿವಾಗುತ್ತಿದೆ. ಪ್ರತಿ ಹೆಜ್ಜೆಯಲ್ಲಿ ದೊಡ್ಡ ದೊಡ್ಡ ಹೀರೋಗಳು ಸಾಥ್ ಕೊಟ್ಟಿದ್ದಾರೆ. ಹೊಸ ಪ್ರೊಡಕ್ಷನ್ ಹೌಸ್ ಆದರೂ ಬಹಳ ಸಪೋರ್ಟ್ ಸಿಕ್ಕಿದೆ. ಸಿನಿಮಾ ಬಹಳ ಚೆನ್ನಾಗಿ ಬಂದಿದೆ. ಇಡೀ ಸ್ಟಾರ್‌ಕಾಸ್ಟ್ ಅದ್ಭುತವಾಗಿ ನಟಿಸಿದ್ದಾರೆ ಎಂದರು. ನಿರ್ದೇಶಕ ಸುರಾಗ್ ಮಾತನಾಡಿ, ಕಷ್ಟಪಟ್ಟು ಮಾಡಿದ ಸಾಂಗ್ ದೊಡ್ಡ ಸ್ಕ್ರೀನ್ ಮೇಲೆ ನೋಡಲು ಖುಷಿಯಾಯ್ತು. ವಿಜಯ್ ಸರ್ ಸಾಂಗ್ ರಿಲೀಸ್ ಮಾಡಿ ಕೊಟ್ಟಿದ್ದಕ್ಕೆ ಧನ್ಯವಾದಗಳು ಎಂದರು.




## ಕನ್ನಡದಲ್ಲೊಂದು ವಿಭಿನ್ನ ಶೀರ್ಷಿಕೆ 'ನಾಯಿ ಇದೆ ಎಚ್ಚರಿಕೆ'

ನಾಯಿ ಸಾಕಿರುವವರ ಮನೆಯ ಮುಂದೆ ಸಾಮಾನ್ಯವಾಗಿ ಕಾಣುವ ಪದ "ನಾಯಿ ಇದೆ ಎಚ್ಚರಿಕೆ". ಈಗ ಇದೇ ಚಿತ್ರದ ಶೀರ್ಷಿಕೆಯಾಗಿರುವುದು ವಿಶೇಷ. ಹೌದು. ವೃತ್ತಿಯಲ್ಲಿ ವೈದ್ಯರಾಗಿರುವ ಡಾ॥ ಲಿಲಾಮೋಹನ್ ಪಿವಿಆರ್ ಅವರು ಈ ವಿಭಿನ್ನ ಶೀರ್ಷಿಕೆಯ ಚಿತ್ರವನ್ನು ನಿರ್ಮಾಣ ಮಾಡುವುದರ ಜೊತೆಗೆ ನಾಯಕನಾಗೂ ಕಾಣಿಸಿಕೊಂಡಿದ್ದಾರೆ. ಡಾ. ಲೀಲಾಮೋಹನ್ ಅವರು ಸಿನಿಮಾ ಉದ್ಯಮದಲ್ಲಿ ಈಗಾಗಲೇ ಐದು ವರ್ಷಗಳಿಂದ ಸಕ್ರಿಯರಾಗಿದ್ದಾರೆ. ಅವರು ಈ ಚಿತ್ರದ ನಿರ್ಮಾಪಕನಾಗುವ ಮೊದಲು, 'ಗಡಿಯಾರ' ಎಂಬ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದ್ದಾರೆ. ಅಲ್ಲದೆ, 'ಕೌರ್ಯ', 'ಪುಟ್ಟಾಣಿ ಪಂಟರುಗಳು', 'ರೋಡ್‌ಕಿಂಗ್', ಮತ್ತು ತೆಲುಗಿನ 'ಕಲ್ಯಾಣ ಮಸ್ತು' ಸೇರಿದಂತೆ ಹಲವಾರು ಚಲನಚಿತ್ರಗಳಲ್ಲಿ ಪ್ರಮುಖ ಪೋಷಕ ಪಾತ್ರಗಳಲ್ಲಿ ನಟಿಸಿದ್ದಾರೆ. ವಿಶೇಷವಾಗಿ, 'ಉಗ್ರಾವತಾರ' ಎಂಬ ಚಿತ್ರದಲ್ಲಿ ಮನಸ್ಸಿಗೆ ನೆಮ್ಮದಿಯಿಲ್ಲದ ಸೈಕೋ ಪಾತ್ರದಲ್ಲಿ ನಟಿಸಿ ಗಮನ ಸೆಳೆದಿದ್ದಾರೆ. ಕಲಿ ಗೌಡ ಅವರು ನಿರ್ದೇಶಿಸಿರುವ "ನಾಯಿ ಇದೆ ಎಚ್ಚರಿಕೆ" ಚಿತ್ರದ ಟೀಸರ್ ಹಾಗೂ ಹಾಡುಗಳನ್ನು ಇತ್ತೀಚೆಗೆ ನಿರ್ಮಾಪಕ, ನಿರ್ದೇಶಕ ಇಂದ್ರಜಿತ್ ಲಂಕೇಶ್ ಬಿಡುಗಡೆ ಮಾಡಿದರು. ನಟ ಪ್ರಥಮ್ ಕೂಡ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಂತರ ಚಿತ್ರತಂಡದ ಸದಸ್ಯರು ಮಾತನಾಡಿದರು. ಹದಿನೈದು ವರ್ಷಗಳಿಂದ ಚಿತ್ರರಂಗದಲ್ಲಿದ್ದೇನೆ. ನಿರ್ದೇಶಕನಾಗಿ ಇದು ಎರಡನೇ ಚಿತ್ರ. ನಾಯಿ ನೀಯತ್ತಿನ ಪ್ರಾಣಿ ಎಂದು ಎಲ್ಲರಿಗೂ ಗೊತ್ತು. ಅದು ಬದುಕಿದಾಗಷ್ಟೇ ಅಲ್ಲ. ಸತ್ತ ಮೇಲೂ ಅದರ ನೀಯತ್ತು ಕಡಿಮೆ ಆಗಲ್ಲ ಎಂಬದನ್ನು ನಮ್ಮ ಚಿತ್ರದ ಮೂಲಕ ತೋರಿಸಿದ್ದೇವೆ. ನಾನು ವೃತ್ತಿಯಲ್ಲೂ ವೈದ್ಯ. ಈ ಚಿತ್ರದಲ್ಲೂ ವೈದ್ಯ. ಇದರಲ್ಲೂ ನನ್ನ ಹೆಸರು ಲೀಲಾ ಅಂತಲೇ. ಇನ್ನೂ ಇದು ನಾಯಿ ಹಾಗೂ ಮನುಷ್ಯನ ಬಾಂಧವ್ಯದ ಕುರಿತಾದ ಸಿನಿಮಾ. ಜೊತೆಗೆ ನಾಯಿ ಕಚ್ಚುವುದರಿಂದ ಆಗುವ ದುಷ್ಪರಿಣಾಮಗಳನ್ನು ತೋರಿಸಿರುವ ಸಿನಿಮಾ. ಇದರ ಜೊತೆಗೆ ಸಸ್ಪೆನ್ಸ್, ಥ್ರಿಲ್ಲರ್, ಹಾರಾರ್, ಸೆಂಟಿಮೆಂಟ್ ಇರುವ ಚಿತ್ರ ಎಂದರು.




## ಉತ್ತಮ ಮೊತ್ತಕ್ಕೆ ಚೌಕಿದಾರ್ ಆಡಿಯೋ ರೈಟ್ಸ್ ಸೇಲ್

'ದಿಯಾ' ಖ್ಯಾತಿಯ ನಟ ಪೃಥ್ವಿ ಅಂಬಾರ್ ಹಾಗೂ ಧನ್ಯರಾಮ್ ಕುಮಾರ್ ಜೋಡಿಯಾಗಿ ನಟಿಸುತ್ತಿರುವ 'ಚೌಕಿದಾರ್' ಸಿನಿಮಾ ಈಗಾಗಲೇ ತನ್ನ ಕಂಟೆಂಟ್ ಮೂಲಕ ಸದ್ದು ಮಾಡುತ್ತಿದೆ. ಲವರ್ ಬಾಯ್ ಆಗಿ ಕಾಣಿಸಿಕೊಳ್ಳುತ್ತಿದ್ದ ಪೃಥ್ವಿ ಕಂಪ್ಲೀಟ್ ಮಾಸ್ ಅವತಾರವೆತ್ತಿರುವ ಈ ಚಿತ್ರದ ಆಡಿಯೋ ರೈಟ್ಸ್ ಉತ್ತಮ ಮೊತ್ತಕ್ಕೆ ಸೇಲ್ ಆಗಿದೆ. ಚೌಕಿದಾರ್ ಸಿನಿಮಾದ ಆಡಿಯೋ ಹಕ್ಕು ಪ್ರಖ್ಯಾತ ಲಹರಿ ಸಂಸ್ಥೆಯ ಭಾಗವಾಗಿರುವ ಎಂಆರ್ ಟಿ ಮ್ಯೂಸಿಕ್ ಸಂಸ್ಥೆ ಪಾಲಾಗಿದೆ. ದಾಖಲೆ ಮೊತ್ತಕ್ಕೆ ಚಿತ್ರತಂಡ ಆಡಿಯೋ ರೈಟ್ಸ್ ಮಾರಾಟ ಮಾಡಿದೆ. ಈ ಮೂಲಕ ಚೌಕಿದಾರ್ ಸಿನಿಮಾ ಬಿಡುಗಡೆಗೂ ಮೊದಲೇ ಒಂದೊಳ್ಳೆ ಮೊತ್ತವನ್ನು ಗಳಿಸಿದಂತಾಗಿದೆ. ರಥಾವರ ಖ್ಯಾತಿಯ ಚಂದ್ರಶೇಖರ್ ಬಂಡಿಯಪ್ಪ ನಿರ್ದೇಶನದಲ್ಲಿ ಚೌಕಿದಾರ್ ಸಿನಿಮಾ ತಯಾರಾಗುತ್ತಿದೆ. ಈ ಚಿತ್ರದಲ್ಲಿ ಸ್ಟಾರ್ ಕಾಸ್ಟ್ ತುಂಬಾನೇ ಚೆನ್ನಾಗಿದೆ. ದೊಡ್ಮನೆಯ ಮೊಮ್ಮಗಳು ಧನ್ಯಾ ರಾಮ್‌ಕುಮಾರ್ ಈ ಚಿತ್ರದಲ್ಲಿ ನಾಯಕಿ ಆಗಿದ್ದಾರೆ. ದಿಯಾ ಚಿತ್ರ ಖ್ಯಾತಿಯ ನಟ ಪೃಥ್ವಿ ಅಂಬಾರ್ ಇಲ್ಲಿ ವಿಭಿನ್ನವಾಗಿಯೇ ಕಾಣಿಸುತ್ತಿದ್ದಾರೆ. ರಗಡ್ ರೋಲ್ ಮೂಲಕವೇ ಎಲ್ಲರ ಗಮನ ಸೆಳೆಯಲಿದ್ದಾರೆ. ಚೈತ್ರದ ಪ್ರೇಮಾಂಜಲಿ ಚಿತ್ರದ ನಾಯಕಿ ಶ್ವೇತಾ ಕೂಡ ಈ ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಈ ಮೂಲಕ ಮತ್ತೊಮ್ಮೆ ದೊಡ್ಡ ಪರದೆಗೆ ಕಾಲಿಟ್ಟಿದ್ದಾರೆ. ಡೈಲಾಗ್ ಕಿಂಗ್ ಸಾಯಿಕುಮಾರ್ ಕೂಡ ಈ ಸಿನಿಮಾದಲ್ಲಿದ್ದಾರೆ. ನಟ ಸುಧಾರಾಣಿ ಪೊಲೀಸ್ ಆಫೀಸರ್ ಪಾತ್ರ ಮಾಡಿದ್ದಾರೆ.




## ಕೌಟುಂಬಿಕ ಕಥಾನಕ 'ಸರಳ ಸುಬ್ಬರಾವ್'

1971ರ ಕಾಲಘಟ್ಟದ ಸುಂದರ ಕೌಟುಂಬಿಕ ಕಥಾಹಂದರ ಹೊಂದಿರುವ ಚಿತ್ರ "ಸರಳ ಸುಬ್ಬರಾವ್". ರಿಯಾನ್ ಕ್ರಿಯೇಷನ್ಸ್ ಲಾಂಛನದಲ್ಲಿ ಲೋಹಿತ್ ನಂಜುಂಡಯ್ಯ ನಿರ್ಮಿಸಿರುವ, ಹಲವು ಸದಭಿರುಚಿ ಚಿತ್ರಗಳ ನಿರ್ದೇಶಕ ಮಂಜು ಸ್ವರಾಜ್ ನಿರ್ದೇಶನದಲ್ಲಿ ಅಜೇಯ್ ರಾವ್ ಹಾಗೂ ಮಿಶಾ ನಾರಂಗ್ ನಾಯಕ, ನಾಯಕಿಯಾಗಿ ನಟಿಸಿರುವ "ಸರಳ ಸುಬ್ಬರಾವ್" ಚಿತ್ರದ ಸುಮಧುರ ಹಾಡೊಂದು ಇತ್ತೀಚೆಗೆ ಬಿಡುಗಡೆಯಾಯಿತು. ಅಜನೀಶ್ ಲೋಕನಾಥ್ ಸಂಗೀತ ನೀಡಿರುವ ಈ ಹಾಡನ್ನು ಕವಿರಾಜ್ ಅವರು ಬರೆದಿದ್ದು, ಸಂಜಿತ್ ಹೆಗ್ಡೆ ಹಾಡಿದ್ದಾರೆ. ಸರಿಗಮ ಯುಟ್ಯೂಬ್ ಚಾನಲ್ ನಲ್ಲಿ ಈ ಹಾಡು ಲಭ್ಯವಿದೆ. ಈ ಸುಮಧುರ ಪ್ರೇಮಗೀತೆಯನ್ನು ಬಿಡುಗಡೆ ಮಾಡುವ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿದ ಚಿತ್ರತಂಡ, ನಂತರ ಚಿತ್ರದ ಕುರಿತು ಮಾತನಾಡಿತ್ತು. "ಸರಳ ಸುಬ್ಬರಾವ್" ನಮ್ಮ ಚಿತ್ರದ ನಾಯಕ, ನಾಯಕಿಯ ಹೆಸರು. ಇದು 1971ರ ಕಾಲಘಟ್ಟದಲ್ಲಿ ನಡೆಯುವ ಕಥೆ. ಕನ್ನಡದಲ್ಲಿ ತೀರ ಅಪರೂಪ ಎನ್ನಬಹುದಾದ ರೆಟ್ರೊ ಶೈಲಿಯ ಕಥೆ ಕೂಡ. ಈ ಕಥೆಯನ್ನು ನಾನು ನಿರ್ಮಾಪಕ ಲೋಹಿತ್ ಅವರ ಮುಂದೆ ಹೇಳಿದಾಗ ಅವರು ಕೇಳಿ ತುಂಬಾ ಮೆಚ್ಚಿಕೊಂಡರು. ಜೊತೆಗೆ ಯಾವುದೇ ಕೊರತೆ ಬಾರದ ಹಾಗೆ ನಿರ್ಮಾಣ ಮಾಡೋಣ ಎಂದರು. ಹೇಳಿದ ಹಾಗೆ ಚಿತ್ರವನ್ನು ಅದ್ದೂರಿಯಾಗಿ ಮಾಡಿ ಮುಗಿಸಿದ್ದಾರೆ. ಈ ಕಥೆಗೆ ಅಜೇಯ್ ರಾವ್ ಅವರೆ ಸೂಕ್ತ ನಾಯಕ ಎನಿಸಿತು. ಅವರು ಕೂಡ ಒಪ್ಪಿಕೊಂಡರು. ಇನ್ನೂ ನಮ್ಮ ಚಿತ್ರದ ನಾಯಕಿ ಪಂಜಾಬಿನ ಮಿಶಾ ನಾರಂಗ್. ನನ್ನ ಅಂದಾಜಿನ ಪ್ರಕಾರ ಕನ್ನಡದಲ್ಲಿ ತುಂಬಾ ವರ್ಷಗಳಿಂದ ಇಂತಹ ಕಥೆ ಬಂದಿಲ್ಲ. ಅಂತಹ ಅಪರೂಪದ ಕಥೆ ಇದು ಎಂದರು.




## ಈ ವಾರ ತೆರೆಗೆ ಡಿ.ವಿ.ಜಿ ಅವರ 'ಮಂಕುತಿಮ್ಮನ ಕಗ್ಗ'

ಹೆಸರಾಂತ ಸಾಹಿತಿ ಡಾ॥ಡಿ.ವಿ.ಗುಂಡಪ್ಪ (ಡಿ.ವಿ.ಜಿ) ಅವರ ಜನಪ್ರಿಯ ಪದ್ಯ ಪುಸ್ತಕ "ಮಂಕುತಿಮ್ಮನ ಕಗ್ಗ". ಕನ್ನಡದಲ್ಲಿ ಈಗಾಗಲೇ ಕೆಲವು ಜನಪ್ರಿಯ ಚಿತ್ರಗಳನ್ನು ನಿರ್ದೇಶಿಸಿರುವ ರಾಜ ರವಿಶಂಕರ್ (ವಿ.ರವಿ), ಡಿ.ವಿ.ಜಿ ಅವರ "ಮಂಕುತಿಮ್ಮನ ಕಗ್ಗ"ವನ್ನು ಚಿತ್ರದ ಮೂಲಕ ತೆರೆಗೆ ತಂದಿದ್ದಾರೆ. ಎನ್ ಎ ಶಿವಕುಮಾರ್ ನಿರ್ಮಿಸಿರುವ ಹಾಗೂ ಮೀನಾಶಿವಕುಮಾರ್ ಸಹ ನಿರ್ಮಾಣವಿರುವ ಈ ಚಿತ್ರ ಮೇ 23ರಂದು ಬಿಡುಗಡೆಯಾಗುತ್ತಿದೆ. ಈ ಚಿತ್ರದಲ್ಲಿ ಡಿ.ವಿ.ಜಿ ಅವರ ಬಾಲ್ಯದ ದಿನಗಳ ಬಗ್ಗೆ ತೋರಿಸಲಾಗಿದೆ. ತಿಮ್ಮಣ್ಣ ಮೇಷ್ಟ್ರು ಪಾತ್ರದಲ್ಲಿ ಹಿರಿಯ ನಟ ರಾಮಕೃಷ್ಣ, ಬಾಲಕ ಸೋಮಿ(ಡಿ.ವಿ.ಜಿ) ಅವರ ಪಾತ್ರದಲ್ಲಿ ಮಾಸ್ಟರ್ ರಣವೀರ್, ಅಲಮೇಲು ಪಾತ್ರದಲ್ಲಿ ಭವ್ಯಶ್ರೀ ರೈ, ವೆಂಕರಮಣಯ್ಯ ಪಾತ್ರದಲ್ಲಿ ರವಿನಾರಾಯಣ್ ಹಾಗೂ ಅಜ್ಜಿಯ ಪಾತ್ರದಲ್ಲಿ ಲಕ್ಷ್ಮೀ ನಾಡಗೌಡ ಅಭಿನಯಿಸಿದ್ದಾರೆ. ಸಾಯಿಪ್ರಕಾಶ್, ನರಸೇಗೌಡ, ಶ್ರೀನಿವಾಸ್ ಕೆಮ್ಮೂರ್ ತಾರಾಬಳಗದಲ್ಲಿದ್ದಾರೆ.



## ಜೂನ್ 12ಕ್ಕೆ ಪವನ್ ಕಲ್ಯಾಣ್ ನಟನೆಯ ಹರಿ ಹರ ವೀರ ಮಲ್ಲು ರಿಲೀಸ್

ಟಾಲಿವುಡ್‌ನ ಪವರ್‌ಸ್ಟಾರ್ ಹಾಗೂ ಆಂಧ್ರ ಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ತಮ್ಮ ಅಭಿಮಾನಿಗಳಿಗೆ ಸರ್ಪ್ರೈಸ್ ಕೊಟ್ಟಿದ್ದಾರೆ. ಡಿಸಿಎಂ ಸ್ಥಾನಕ್ಕೇರಿದ ಬಳಿಕ ಪವನ್ ರಾಜಕೀಯದಲ್ಲಿ ಸಿಕ್ಕಾಪಟ್ಟೆ ಬ್ಯುಸಿಯಾಗಿಬಿಟ್ಟಿದ್ದರು. ಹೀಗಾಗಿ ಸಿನಿಮಾಗಳಿಗೆ ಬ್ರೇಕ್ ಕೊಟ್ಟಿದ್ದರು. ಇದೀಗ ಪವನ್ ಕಲ್ಯಾಣ್ ನಟನೆಯ ಬಹುನಿರೀಕ್ಷಿತ ಸಿನಿಮಾ ಹರಿಹರ ವೀರ ಮಲ್ಲು ಚಿತ್ರದ ಬಿಡುಗಡೆ ದಿನಾಂಕ ನಿಗದಿಯಾಗಿದೆ. ಹರಿಹರ ವೀರ ಮಲ್ಲು ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ಕೆಲಸ ಭರದಿಂದ ಸಾಗುತ್ತಿದೆ. ಈಗಾಗಲೇ ಬಿಡುಗಡೆಯಾಗಿರುವ ಹಾಡುಗಳು ಸಿನಿಪ್ರಿಯರಿಗೆ ಇಷ್ಟವಾಗಿವೆ. ಬಿಗ್ ಬಜೆಟ್ ತಯಾರಾಗಿರುವ ಹರಿಹರ ವೀರ ಮಲ್ಲು ಸಿನಿಮಾ ಜೂನ್ 12ರಂದು ಪ್ಯಾನ್ ಇಂಡಿಯಾ ಲೆವೆಲ್‌ನಲ್ಲಿ ಬಿಡುಗಡೆಯಾಗಲಿದೆ. ಹರಿಹರ ವೀರ ಮಲ್ಲುವಾಗಿ ಪವನ್ ಕಲ್ಯಾಣ್ ಸಿನಿಮಾದಲ್ಲಿ ಅಬ್ಬರಿಸಿದ್ದಾರೆ.




## ಮೊದಲ ಹಾಡಿನಲ್ಲೇ ಜನಮನಸೂರೆಗೊಂಡ 'ಮಾರುತ'

ಹೆಸರಾಂತ ನಿರ್ದೇಶಕ ಡಾ॥ಎಸ್ ನಾರಾಯಣ್ ನಿರ್ದೇಶನದ, ದುನಿಯಾ ವಿಜಯ್ ಹಾಗೂ ಶ್ರೇಯಸ್ ಮಂಜು ಪ್ರಮುಖ ಪಾತ್ರದಲ್ಲಿ ನಟಿಸಿರುವ ಮತ್ತು ಕೆ.ಮಂಜು - ರಮೇಶ್ ಯಾದವ್ ಈಶಾ ಪ್ರೊಡಕ್ಷನ್ಸ್ ಲಾಂಛನದಲ್ಲಿ ನಿರ್ಮಿಸಿರುವ ಬಹು ನಿರೀಕ್ಷಿತ ಚಿತ್ರ "ಮಾರುತ" ಚಿತ್ರದ ಮೊದಲ ಹಾಡಿನ ಲಿರಿಕಲ್ ವಿಡಿಯೋ ಇತ್ತೀಚೆಗೆ ಅದ್ದೂರಿಯಾಗಿ ಬಿಡುಗಡೆಯಾಯಿತು. ಎಸ್ ನಾರಾಯಣ್ ಅವರೆ ಬರೆದು, ರಾಗ ಸಂಯೋಜಿಸಿರುವ ಈ ಹಾಡನ್ನು ಖ್ಯಾತ ಗಾಯಕ ಚಂದನ್ ಶೆಟ್ಟಿ ಹಾಡಿದ್ದಾರೆ. ಜಂಕಾರ್ ಮ್ಯೂಸಿಕ್ ಮೂಲಕ ಬಿಡುಗಡೆಯಾಗಿರುವ "ಮಾರುತ" ಚಿತ್ರದ ಮೊದಲ ಹಾಡು ಜನ ಮನಸೂರೆಗೊಂಡಿದ್ದು, ಅಧಿಕ ಸಂಖ್ಯೆಯಲ್ಲಿ ವೀಕ್ಷಣೆಯಾಗುತ್ತಿದೆ.




## ನಾಯಕನ ಹುಟ್ಟುಹಬ್ಬದಂದು 'ಒಂದು ಅಂಕದ ಪ್ರಶ್ನೆ' ಪೋಸ್ಟರ್




ಕನ್ನಡದಲ್ಲಿ ಸಾಕಷ್ಟು ಪ್ರಯೋಗಾತ್ಮಕ ಚಿತ್ರಗಳು ಬರುತ್ತಿರುತ್ತದೆ. ಆ ಸಾಲಿಗೆ " ಒಂದು ಅಂಕದ ಪ್ರಶ್ನೆ " ಸೇರಲಿದೆ. "ಬಡ್ಡೀಸ್", "ರಾನಿ" ಮುಂತಾದ ಚಿತ್ರಗಳಲ್ಲಿ ಸಹನಟನಾಗಿ ನಟಿಸಿದ್ದ ಗಿರೀಶ್ ಹೆಗ್ಡೆ ಈ ಚಿತ್ರದ ನಾಯಕನಾಗಿ ನಟಿಸಲಿದ್ದಾರೆ. ಈ ಹಿಂದೆ "ಲುಂಗಿ", "ಸ್ಟ್ರಾಬೆರಿ" ಹಾಗೂ ಬಿಡುಗಡೆ ಹಂತ ತಲುಪಿರುವ ನೂತನ ಚಿತ್ರವೊಂದನ್ನು ಸೇರಿದಂತೆ ಮೂರು ಚಿತ್ರಗಳನ್ನು ನಿರ್ದೇಶಿಸಿರುವ ಅರ್ಜುನ್ ಲೂಯಿಸ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ನಮಸ್ಥೆ ಎಂಟರ್ ಟೈನರ್ಸ್ ಲಾಂಛನದಲ್ಲಿ ಕಾರ್ಲಿಸ್ ಡಿಕುನ್ಹಾ ಮೊದಲ ಬಾರಿಗೆ ನಿರ್ಮಾಣ ಮಾಡುತ್ತಿದ್ದಾರೆ. ಇತ್ತೀಚೆಗೆ ನಾಯಕ ಗಿರೀಶ್ ಹೆಗ್ಡೆ ಅವರ ಹುಟ್ಟುಹಬ್ಬದ ದಿನ ಈ ನೂತನ ಚಿತ್ರದ ಪ್ರಥಮ ಪೋಸ್ಟರ್ ಬಿಡುಗಡೆಯಾಗಿದೆ. ಆ ಮೂಲಕ ನಾಯಕನಿಗೆ ಚಿತ್ರತಂಡ ಹುಟ್ಟುಹಬ್ಬದ ಶುಭಾಶಯ ತಿಳಿಸಿದೆ. ಉಡುಪಿ, ಮಂಗಳೂರು ಆಸುಪಾಸಿನಲ್ಲಿ ಚಿತ್ರೀಕರಣ ನಡೆಯಲಿದೆ ಎಂದು ನಿರ್ದೇಶಕ ಅರ್ಜುನ್ ಲೂಯಿಸ್ ತಿಳಿಸಿದ್ದಾರೆ.

## ಪರಮಪೂಜ್ಯರ ಸಮ್ಮುಖದಲ್ಲಿ 'ಮಾಯಾವಿ' ಹಾಡುಗಳು ಹಾಗೂ ಟೀಸರ್




ಕನ್ನಡ ಚಿತ್ರರಂಗದಲ್ಲಿ ನೂತನ ಪ್ರತಿಭೆಗಳ ಆಗಮನ ಹೆಚ್ಚಾಗುತ್ತಿದೆ. ಈಗ ಆ ಸಾಲಿಗ ಕೋಟೆನಾಡಿನ ಹುಡುಗ ರಘು ರಾಮ್ ಸೇರ್ಪಡೆಯಾಗಿದ್ದಾರೆ. ನಾಯಕನಾಗಷ್ಟೇ ಅಲ್ಲದೆ ಇಷ್ಟ ಎಂಟರ್ಟೈನರ್ಸ್ ಮೂಲಕ "ಮಾಯಾವಿ" ಚಿತ್ರವನ್ನು ನಿರ್ಮಾಣ ಕೂಡ ಮಾಡಿದ್ದಾರೆ. ಶಂಕರ್ ಜಿ ನಿರ್ದೇಶಿಸಿರುವ ಈ ಚಿತ್ರದ ಟೀಸರ್ ಹಾಗೂ "ಆವರಿಸು" ಹಾಡಿನ ಅನಾವರಣ ಇತ್ತೀಚೆಗೆ ಅದ್ದೂರಿಯಾಗಿ ನೆರವೇರಿತು. ಶ್ರೀಶಾಂತವೀರ ಮಹಾಸ್ವಾಮಿಗಳು ಹಾಗೂ ಶ್ರೀ ಈಶ್ವರಾನಂದಾಪುರಿ ಮಹಾಸ್ವಾಮಿಗಳು "ಮಾಯಾವಿ" ಚಿತ್ರದ ಟೀಸರ್ ಹಾಗೂ ಹಾಡಿನ ಲಿರಿಕಲ್ ವಿಡಿಯೋ ಅನಾವರಣ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು. ಅಂಬೇಡ್ಕರ್ ಸೇನೆಯ ರಾಜ್ಯಾಧ್ಯಕ್ಷರಾದ ಪಿ.ಮೂರ್ತಿ ಉಪಸ್ಥಿತರಿದ್ದರು. ನಂತರ ಚಿತ್ರತಂಡದ ಸದಸ್ಯರು "ಮಾಯಾವಿ" ಬಗ್ಗೆ ಮಾತನಾಡಿದರು.

## ಕಾನೂನು ಸುವ್ಯವಸ್ಥೆ ಕೆಡಿಸುವವರ ಮೇಲೆ ಸಮರ

ಈ ಹಿಂದೆ ಮುಕ್ತಿ, ತ್ರಿಪುರ, ಆರ್ಟಿಕಲ್ 370 ಚಿತ್ರ ನಿರ್ದೇಶಿಸಿದ್ದ ಕೆ.ಶಂಕರ್ ನಿರ್ದೇಶನದ ಮತ್ತೊಂದು ಚಿತ್ರ "ಹಲೋ ಸರ್". ಕನ್ನಡ, ತೆಲಗು, ತಮಿಳು ಸೇರಿದಂತೆ 3 ಭಾಷೆಗಳಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ಶಂಕರ್ ಅವರೇ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ರಚಿಸಿದ್ದಾರೆ. ಸಮಾಜದಲ್ಲಿ ತಿಳಿದೂ ಅಪರಾಧ ಕೃತ್ಯ ತಪ್ಪು ಮಾಡಿ, ತಮ್ಮ ಹಣ ಬಲ, ಜನರ ಸಾಮರ್ಥ್ಯವನ್ನು ಬಳಸಿಕೊಂಡು, ಪ್ರಾಮಾ ಣಿಕರ ಹಾಗೂ ಪೊಲೀಸ್, ರಾಜಕಾರಣಿ ಗಳ ವಿರುದ್ಧ ಸಮರ ಸಾರುವ ಮತ್ತು ಪ್ಲಾ ಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನ ಈ ಚಿತ್ರದಲ್ಲಿದೆ.






## ಟೀಸರ್‌ನಲ್ಲಿ 'ಕೊತ್ತಲವಾಡಿ'.. ಶರಣ್ ಸಾಥ್!



ರಾಕಿಂಗ್ ಸ್ಟಾರ್ ಅವರ ತಾಯಿ ತಮ್ಮದೇ ಪಿಎ ಪ್ರೊಡಕ್ಷನ್ಸ್ ಲಾಂಛನದಲ್ಲಿ ಕೊತ್ತಲವಾಡಿ ಎಂಬ ಚಿತ್ರವನ್ನು ನಿರ್ಮಿಸುತ್ತಿದ್ದಾರೆ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಬೆಂಗಳೂರಿನ ಒರೆಯನ್ ಮಾಲ್‌ನಲ್ಲಿ ನಡೆಯಿತು. ಟೀಸರ್ ಕಾರ್ಯಕ್ರಮದಲ್ಲಿ ನಿರ್ಮಾಪಕಿ ಪುಷ್ಪ ಅರುಣ್ ಕುಮಾರ್, ಯಶ್ ತಂದೆ ಅರುಣ್ ಕುಮಾರ್, ನಟ ಪೃಥ್ವಿ ಅಂಬರ್, ನಟಿ ಕಾವ್ಯ, ಗೋಪಾಲಕೃಷ್ಣ ದೇಶಪಾಂಡೆ, ರಾಜೇಶ್ ನಟರಂಗ, ನಿರ್ದೇಶಕ ಶ್ರೀರಾಜ್ ಭಾಗಿಯಾಗಿದ್ದರು. ನಟ ಶರಣ್ ಆಗಮಿಸಿ ಟೀಸರ್ ಅನಾವರಣ ಮಾಡಿ ಮಾತನಾಡಿ, ಒಂದು ಹೊಸ ಶುರುವಾತಿನ ವೈಬ್‌ಇಲ್ಲಿ ಕಾಣಿಸುತ್ತಿದೆ. ನಮ್ಮ ಯಶಸ್ಸಿನ ಗುಟ್ಟು ಈ ಒಗ್ಗಟ್ಟಿನ ಸಾಕ್ಷಿ, ಈ ಚಿತ್ರಕ್ಕೆ ಕೆಲಸ ಮಾಡಿರುವ ಮುಖದಲ್ಲಿ ಕುತೂಹಲ, ಪಾಸಿಟಿವ್ ಎನರ್ಜಿ, ಕಾಣಿಸುತ್ತದೆ. ಇಡೀ ತಂಡಕ್ಕೆ ದೊಡ್ಡ ಯಶಸ್ಸು ಸಿಗಲಿ ಎಂದು ಶುಭ ಹಾರೈಸಿದರು.

## 'ಕರಿಮಣಿ ಮಾಲಿಕ ನೀನಲ್ಲ' ಟೀಸರ್ ಬಿಡುಗಡೆ..



ಯುಟರ್ನ್2 ಖ್ಯಾತಿಯ ಚಂದ್ರು ಓಬಯ್ಯ ಅವರೀಗ ಒಂದರ ಮೇಲೊಂದರಂತೆ ಸಿನಿಮಾಗಳನ್ನು ಆರಂಭಿಸದ್ದಾರೆ, ಕೆಲವನ್ನು ಬಿಡುಗಡೆ ಹಂತಕ್ಕೂ ತಂದಿದ್ದಾರೆ, ಅದರಲ್ಲಿ ಕರಿಮಣಿ ಮಾಲಿಕ ನೀನಲ್ಲ ಕೂಡ ಒಂದು. ಈಗಾಗಲೇ ತನ್ನ ಶೂಟಿಂಗ್ ಮುಗಿಸಿರುವ ಚಿತ್ರವೀಗ ಪೋಸ್ಟ್ ಪ್ರೊಡಕ್ಷನ್ ಕೊನೇ ಹಂತದಲ್ಲಿದೆ, ಚಂದ್ರು ಓಬಯ್ಯ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನದ ಜತೆಗೆ ನಿರ್ಮಾಣದ ಜವಾಬ್ದಾರಿಯನ್ನೂ ಸಹ ಚಂದ್ರು ಓಬಯ್ಯ ಹೊತ್ತಿದ್ದಾರೆ. ಚಿತ್ರದ ಸಹ ನಿರ್ಮಾಪಕರಾಗಿ ಅನ್ನಪೂರ್ಣ ಶಂಕ್ರಯ್ಯ ಕೈಜೋಡಿಸಿದ್ದಾರೆ. ಬಿಎಂಟಿಸಿಯಲ್ಲಿ ಕೆಲಸ ಮಾಡುತ್ತಿರುವ ಮಾರುತಿ ಅವರು ಚಿತ್ರದ ನಾಯಕನಾಗಿದ್ದು, ರಮಿಕ ಸುತಾರ ನಾಯಕಿ. ಇತ್ತೀಚೆಗೆ ಈ ಚಿತ್ರದ ಟೀಸರನ್ನು ನಿರ್ದೇಶಕ ಪಲ್ಲಕ್ಕಿ ರಾಧಾಕೃಷ್ಣ ಹಾಗೂ ಅಂಜಿನಪ್ಪ ಸೇರಿ ಬಿಡುಗಡೆ ಮಾಡಿದರು.

## ಗೌರಿಶ್ರೀ ನಿರ್ದೇಶನದ ಆಕ್ರೋಶದಲ್ಲಿ ಯಶ್ವಂತ್..

ಗೌರಿಶ್ರೀ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ 30 ನಿಮಿಷಗಳ "ಆಕ್ರೋಶ" ಎಂಬ ಕಿರುಚಿತ್ರದಲ್ಲಿ ನಟಿಸುವ ಮೂಲಕ ಯಶ್ವಂತ್ ಅಭಿನಯ ಆರಂಭಿಸಿದ್ದಾರೆ. ಜಗದೀಶ್ ವರ್ಮ ನಿರ್ಮಾಣದ ಈ ಕಿರುಚಿತ್ರದ ಪ್ರದರ್ಶನ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು. ಹಿರಿಯ ನಿರ್ದೇಶಕರಾದ ಓಂ ಸಾಯಿಪ್ರಕಾಶ್, ಪುರುಷೋತ್ತಮ್ ಓಂಕಾರ್, ರತ್ನಮಾಲ ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕಿರುಚಿತ್ರ ತಂಡಕ್ಕೆ ಶುಭ ಕೋರಿದರು. ನಿರ್ಮಾಪಕ ಜಗದೀಶ್ ವರ್ಮ, ನಿರ್ದೇಶಕಿ ಗೌರಿಶ್ರೀ, ನಟಿ ಪ್ರವಲ್ಲಿಕ ನಟ ಪ್ರೇಮ್ ಮಾಲೂರು ಮುಂತಾದವರು ಕಿರುಚಿತ್ರದ ಬಗ್ಗೆ ಮಾಹಿತಿ ಹಂಚಿಕೊಂಡರು. ರಾಜಾರವಿ ಛಾಯಾಗ್ರಹಣ, ವಿನು ಮನಸು ಸಂಗೀತ ನಿರ್ದೇಶನ, ಶಿವರಾಜ್ ಮೇಹು ಸಂಕಲನವಿರುವ ಈ ಚಿತ್ರದ ತಾರಾಬಳಗದಲ್ಲಿ ಯಶ್ವಂತ್, ಗುರುರಾಜ್ ಹೊಸಕೋಟೆ, ಭಾಗ್ಯ, ಗೌರಿಶ್ರೀ ಪ್ರವಲ್ಲಿಕ, ಪ್ರೇಮ ಮಾಲೂರ್ ಮುಂತಾದವರಿದ್ದಾರೆ.



## 100 ಮಿಲಿಯನ್ ಮಿನಿಟ್ ಸ್ಟ್ರೀಮಿಂಗ್ ಜಾಜಿಯ ಕಥೆ..

ಜೀ ಕನ್ನಡ ಮೊದಲ ಬಾರಿಗೆ ಒಟಿಟಿಯಲ್ಲಿ ಬಿಡುಗಡೆ ಮಾಡಿರುವ ಅಯ್ಯನ ಮನೆ ವೆಬ್ ಸರಣಿಗೆ ಅಭೂತಪೂರ್ವ ಪ್ರತಿಕ್ರಿಯೆ ಸಿಕ್ಕಿದೆ. ಜಾಜಿಯ ರೋಚಕ ಕಥೆಯ ಈ ವೆಬ್ ಸರಣಿ ಬರೋಬ್ಬರಿ 100 ಮಿಲಿಯನ್ ಮಿನಿಟ್ ವೀಕ್ಷಣೆ ಕಂಡಿದೆ. 7 ಸಂಚಿಕೆಗಳನ್ನು ಒಳಗೊಂಡಿರುವ ಅಯ್ಯನ ಮನೆ ವೆಬ್ ಸರಣಿಯಲ್ಲಿ 'ದಿಯಾ' ಸಿನಿಮಾ ನಟಿ ಖುಷಿ ರವಿ ಜಾಜಿ ಪಾತ್ರದಲ್ಲಿ ನಟಿಸಿದ್ದಾರೆ. ಒಲವಿನ ನಿಲ್ದಾಣ ಸೀರಿಯಲ್‌ನ ನಾಯಕ ನಟ ಅಕ್ಷಯ್ ನಾಯಕ್, ಹಾಗೂ ಕಾಂತಾರ ನಟಿ ಮಾನಸಿ ಸುಧೀರ್ ಕೂಡ ಪ್ರಮುಖ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಅಯ್ಯನ ಮನೆ ವೆಬ್ ಸೀರೀಸ್ ಅನ್ನು ನಿರ್ದೇಶಕ ರಮೇಶ್ ಇಂದಿರಾ ಅವರು ನಿರ್ದೇಶಿಸಿದ್ದಾರೆ. ಈ ವೆಬ್ ಸಿರೀಸ್‌ನಲ್ಲಿ ರಮೇಶ್ ಇಂದಿರಾ, ಶೋಭರಾಜ್ ಪಾವೂರ್, ಅನಘಾ ನಾಗೇಶ್, ರಮ್ಯಾ ಶಂಕರ್, ಗೌರಿ ಕೃಷ್ಣ, ವಿಜಯ್ ಶೋಭರಾಜ್ ಸೇರಿದಂತೆ ಹಲವರು ನಟಿಸಿದ್ದಾರೆ.









Edited, Published, Printed by Lalita Kumari (Lalithasri Preetham Rai) Shop N0: 6, Lingamma Towers. Opp. Pandeshwar police station, Pandeshwar Mangaluru 575001. Dakshina Kannada.
All Rights Reserved RNI Ref: 1327299/KARKAN26532. Printed @ N R K Media World, No-10, 'A' 1st floor, 4th cross, 4th main, Gandhinagar Bengaluru-560009. email: karavalitharangini@gmail.com PH: +91 9880109212